ಶ್ರೀ ಕೆ.ಎಸ್. ಈಶ್ವರಪ್ಪ : ಇದನ್ನು ಮುಖ್ಯಮಂತ್ರಿಗಳು ರಾಜಕೀಯ ಪಿತೂರಿ ಎಂದು ಕರೆಯುತ್ತಾರೆ, ಅವರ ಅಧ್ಯಕ್ಷರನ್ನು ಸತ್ಯಹರಿಶ್ಚಂದ್ರ ಎಂದು ವರ್ಣನೆ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು : ಮತ್ತೆ ವಾಪಸ್ ಚರ್ಚೆ ಮಾಡುವ ಪ್ರಶ್ನೆಯೇ ಇಲ್ಲ.

(ಗೊಂದಲ)

ಈಗ ಯಾವುದು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ. ಅಧ್ಯಕ್ಷರು ಒಂದು ತೀರ್ಪು ಕೊಟ್ಟ ಮೇಲೆ ಅದನ್ನು ಓಪನ್ ಮಾಡುವುದು ಸರಿಯಲ್ಲ, ಸದನದಲ್ಲಿ ಯಾವಾಗಲೂ ಈ ರೀತಿ ಆಗಿಲ್ಲ ದಯಮಾಡಿ ಸಹಕಾರ ಮಾಡಿರಿ.

(ಗೊಂದಲ)

ಇಲ್ಲಿ ಎಂಟು ಸದಸ್ಯರು ಶೂನ್ಯವೇಳೆಗೆಂದು ಜನರ ಕಷ್ಟದ ಬಗ್ಗೆ ಕಳುಹಿಸಿದ್ದಾರೆ. ಅದನ್ನು ಮಾಡೋಣ. ಈಗ ಮಾನ್ಯ ಶಂಕರನಾರಾಯಕರು ಹೇಳಿಕೆ ನೀಡುವರು.

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಭೈರೇಗೌಡ : ಅನಾವಶ್ಯಕವಾಗಿ ಇವರು ಸದನದ ಸಮಯ ಕಳೆಯುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅನಾವಶ್ಯಕವಾಗಿ ಸದನವನ್ನು ತಪ್ಪುದಾರಿಗೆಳೆಯುತ್ತಿರುವವರು ಬೈರೇಗೌಡರು. ವಿರೋಧಪಕ್ಷಗಳಿಗೆ ಪತ್ರಿಕೆಗಳೇ ಆಧಾರ, ಸರ್ಕಾರದ ನೀತಿ ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ವಾಟಾಳ್ ಪಕ್ಷದ ಸದಸ್ಯರು ಹಾಗೂ ಸಿಸಿಐ (ಎಂ) ಪಕ್ಷದ
ಶ್ರೀ ಶ್ರೀರಾಮರೆಡ್ಡಿಯವರುಗಳು ಸಭಾತ್ಯಾಗ ಮಾಡಿದರು)

ಮಂತ್ರಿಗಳ ಹೇಳಿಕೆ

1993-94ರ ಸಾಲಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಲ್ಲಿ ಅವ್ಯವಹಾರ ಕುರಿತು

ಡಾ॥ ಎಂ. ಶಂಕರನಾಯಕ್ : ಉಪಾಧ್ಯಕ್ಷರೇ, ಕಳೆದ ತಿಂಗಳ 23ನೇ ತಾರೀಖು ನಿಯಮ 67ರ ಅಡಿಯಲ್ಲಿ 93-94ರ ಸಾಲಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಲ್ಲಿ ಅವ್ಯವಹಾರವಾಗಿದೆ ಎಂಬ ಬಗ್ಗೆ ಚರ್ಚೆ ಆಯಿತು. ಅವತ್ತು ನನ್ನ ಬಳಿ ಮಾಹಿತಿ ಇರಲಿಲ್ಲ, ಮಾಹಿತಿ ತರುವವರೆಗೆ ಅದನ್ನು ಮುಂದೂಡಿ ಎಂದು ಹೇಳಿದೆ. ಆದರೆ ಅವರು ಚರ್ಚೆ ಆಗಲಿ ಆಮೇಲೆ ಉತ್ತರ ಕೊಡಿ ಎಂದರು, ಅಂದಿನ ಚರ್ಚೆಯಲ್ಲಿ, ಅನೇಕ ಪತ್ರಿಕೆಗಳಲ್ಲಿ ಈಗಿನ ಸರ್ಕಾರ ಕೂಡ ಶಾಮೀಲಾಗಿದೆ, ವೈದ್ಯಕೀಯ ಸೀಟು ಹಂಚಿಕೆಯಲ್ಲಿ ಬಹಳ ತಾರತಮ್ಯವಾಗುತ್ತಿದೆ. ಕೊಟ್ಯಾಂತರ ರೂ. ಅವ್ಯವಹಾರವಾಗಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ಏನಾಗುತ್ತದೆ ಅಂದರೆ ಸಾರ್ವಜನಿಕರಲ್ಲಿ ಈಗಿನ ಸರ್ಕಾರವೋ ಯಾರು

ಮಾಡಿದ್ದಾರೆ ಎಂದು ಗುಟ್ಟಾಗಿ ಇದೆ. ಆ ದೃಷ್ಟಿಯಿಂದ 93-94ನೇ ಸಾಲಿನಲ್ಲಿ ಏನಾಗಿದೆ ಎಂಬ ಬಗ್ಗೆ ಹೇಳಿಕೆ ಈಗ ಕೊಡುತ್ತಿದ್ದೇನೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಾಣೆ ಇಲಾಖೆಯ ಕಾರ್ಯದರ್ಶಿ ಅವರು ದಿನಾಂಕ 28.3.98ರಂದು ಘನತೆವೆತ್ತ ರಾಜ್ಯಪಾಲರಿಗೆ ಪತ್ರ ಬರೆದು ಮಾನ್ಯ ಉಪ ಲೋಕಾಯುಕ್ತರ ವರದಿಯ ಆಧಾರದ ಮೇಲೆ ಡಾ|| ಎಸ್. ಕಾಂತ ಅವರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪ್ರಸ್ತುತ ಡಾ|| ಕಾಂತ ಅವರು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿರುವುದರಿಂದ, ಕುಲಪತಿಗಳೂ ಆಗಿರುವ ಘನತೆವೆತ್ತ ರಾಜ್ಯಪಾಲರು ದಿನಾಂಕ 24.10.1997ರ ಮಾನ್ಯ ಉಪ ಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕಾಗಿದೆ.

ಬ್ಯಾಕ್ ಲಾಗ್ : ಮಾನ್ಯ ಸದಸ್ಯರುಗಳು ವಿಷಯ ಮಂಡಿಸುತ್ತಾ, 1995 ರಿಂದ 1996ರ ಅವಧಿಯಲ್ಲಿ ಸುಮಾರು 471 ಹೆಚ್ಚುವರಿ ಸೀಟುಗಳನ್ನು ಸರ್ಕಾರ ನೀಡಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಬ್ಯಾಕಲಾಗ್ ಪದ್ಧತಿಯು ಖಾಸಗಿ ಕಾಲೇಜುಗಳು ಪ್ರಾರಂಭಗೊಂಡಂದಿನಿಂದ ಅನುಷ್ಠಾನವಾಗಿ ನಡೆದುಕೊಂಡೇ ಬಂದಿದೆ. ಭಾರತೀಯ ವೈದ್ಯಕೀಯ ಪರಿಷತ್ತು (ಎಂ.ಸಿ. ಐ.) ಅನುಮತಿ ನೀಡಿರುವಂತೆ ವೈದ್ಯಕೀಯ ಕಾಲೇಜಿಗೆ ಸೇರಿದ ವಿದ್ಯಾರ್ಥಿಗಳು ಹಲವು ಕಾರಣಗಳಿಂದಾಗಿ ಕಾಲೇಜನ್ನು ತ್ಯಜಿಸುವುದರಿಂದ ಲಭ್ಯವಾಗುವ ಸೀಟುಗಳನ್ನು ಭರ್ತಿ ಮಾಡಿಕೊಂಡು ಆಯಾ ಕಾಲೇಜಿಗೆ ನಿಗದಿ ಪಡಿಸಿದ ಸೀಟುಗಳಿಗೆ ಪರಿಣಮಿಸಿದ್ದು ಅವ್ಯವಸಿತವಾಗಿದ್ದರಿಂದ ಸರ್ಕಾರವು 1989ರಲ್ಲಿ ಬ್ಯಾಕ್‌ಲಾಗ್ ಪದ್ಧತಿಯನ್ನು ವ್ಯವಸ್ಥಿತ ರೂಪದಲ್ಲಿ ಜಾರಿಗೆ ತಂದಿದೆ. ಖಾಸಗಿ ಕಾಲೇಜುಗಳಲ್ಲಿ ವಿವಿಧ ಕಾರಣಗಳಿಂದ ಖಾಲಿ ಬೀಳುವ ಸೀಟುಗಳನ್ನು ನಿಗದಿಪಡಿಸಿದ ಸೀಟುಗಳ ಸಂಖ್ಯೆಗೆ ನಂತರದ ವರ್ಷಗಳಲ್ಲಿ ಸರಿದೂಗಿಸಲು ಈ ಪದ್ಧತಿಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಈ ರೀತಿಯ ಸೀಟು ಹೊಂದಾಣಿಕೆಯ ವಿಧಾನದಿಂದ ಖಾಸಗಿ ಕಾಲೇಜುಗಳಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯ ಏರುಪೇರಾಗದಂತೆ ನೋಡಿಕೊಳ್ಳುವ ಹಾಗೂ ಇದರಿಂದ ಆ ಕಾಲೇಜಿನ ಕ್ಲಿನಿಕಲ್ ಸೌಲಭ್ಯ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬಹುದೆಂಬ ಚಿಂತನೆಯೇ ಈ ಬ್ಯಾಕ್‌ಲಾಗ್ ಉದ್ದೇಶವಾಗಿತ್ತು.

1989ರಿಂದ ಪ್ರತಿ ವರ್ಷವೂ ಬ್ಯಾಕ್‌ಲಾಗ್ ಆದೇಶವನ್ನು ಸರ್ಕಾರವು ನವೀಕರಿಸುತ್ತಲೇ ಬಂದಿದೆ. ಆದಾಗ್ಯೂ ಬ್ಯಾಕ್‌ಲಾಗ್ ಪದ್ಧತಿಯಿಂದ ಉಂಟಾಗುತ್ತಿದ್ದ ಆಡಳಿತಾತ್ಮಕ ಗೊಂದಲ, ಅನಗತ್ಯ ಕೋರ್ಟು ವ್ಯವಹಾರ, ಹಾಗೂ ಸಾರ್ವಜನಿಕರಲ್ಲಿನ ಅನುಮಾನಕ್ಕೆ ಆಸ್ಪದ, ಮುಂತಾದವುಗಳಿಗೆ ಕೊನೆ ಹೇಳಲು ದಿನಾಂಕ 7.8.1996ರಿಂದ ಬ್ಯಾಕ್‌ಲಾಗ್ ಪದ್ಧತಿಯನ್ನು ಸಚಿವ ಸಂಪುಟದ ಅನುಮೋದನೆಯೊಂದಿಗೆ ರದ್ದುಪಡಿಸಿ ಆದೇಶ ಹೊರಡಿಸಲಾಗಿದೆ. ಅಲ್ಲದೆ ಈ ಆದೇಶದನ್ವಯ ಬ್ಯಾಕ್‌ಲಾಗ್ ಸೀಟುಗಳ ಮರು ಹಂಚಿಕೆ ಬಗ್ಗೆ ಸರ್ಕಾರ ಈ ಹಿಂದೆ ಹೊರಡಿಸಿದ ಎಲ್ಲಾ ಆದೇಶಗಳನ್ನು ಹಿಂದಕ್ಕೆ ಪಡೆಯಲಾಗಿದೆ. ಹಾಗೂ ಇನ್ನು ಮುಂದೆ ಯಾವುದೇ ಬ್ಯಾಕ್‌ಲಾಗ್ ಸೀಟುಗಳನ್ನು ಭರ್ತಿ ಮಾಡುವುದಿಲ್ಲವೆಂದು ರಾಜ್ಯ ಉಚ್ಚ ನ್ಯಾಯಾಲಯಕ್ಕೂ ಸಹ ಮುನ್ನೆಚ್ಚರಿಕೆ ಬರೆದುಕೊಡಲಾಗಿದೆ.

ಕೊನೆಯದಾಗಿ, 20 ಅನರ್ಹ ವಿದ್ಯಾರ್ಥಿಗಳ ಪ್ರಕರಣ ನಡೆದಿರುವುದು 1993-94ರಲ್ಲಿ, ಹೆಚ್ಚುವರಿ (ಬ್ಯಾಕ್‌ಲಾಗ್) ಸೀಟುಗಳ ಹಂಚಿಕೆಯಾಗಿರುವುದು 1989 ರಿಂದ 1996ರ ಏಪ್ರಿಲ್

ಅವಧಿಯಲ್ಲಿ, ಡಾ|| ಎಸ್. ಕಾಂತಾರವರು ವೈದ್ಯಕೀಯ ಶಿಕ್ಷಣ ನಿರ್ದೇಶಕರಾಗಿರುವುದು 8.11.93ರಲ್ಲಿ, ಉಪಕುಲಪತಿಗಳಾಗಿ ನೇಮಕಗೊಂಡಿರುವುದು ದಿನಾಂಕ 25.5.96ರ ಆದೇಶದನ್ವಯ.

ಆದರೆ, ನಾನು ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವನಾಗಿ ಅಧಿಕಾರ ವಹಿಸಿಕೊಂಡಿದ್ದು ದಿನಾಂಕ 5.6.96ರಂದು. ಲೋಕಾಯುಕ್ತ ತಪ್ಪಿತಸ್ಥರೆಂದು ಗುರುತಿಸಿದ ಒಬ್ಬ ಅಧಿಕಾರಿ ಹಾಗೂ ಒಬ್ಬ ನೌಕರನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಆದೇಶ ಹೊರಡಿಸಿದ್ದು ದಿನಾಂಕ 27.7.96 ರಂದು ಬ್ಯಾಕ್‌ಲಾಗ್ ಪದ್ಧತಿಯನ್ನು ರದ್ದುಪಡಿಸಿದ್ದು ದಿನಾಂಕ 7.8.96ರ ಆದೇಶದ ಮೂಲಕ ನಾನು ಅಧಿಕಾರ ವಹಿಸಿಕೊಂಡ ಕೇವಲ 2 ತಿಂಗಳೊಳಗೆ ಈ ಎರಡೂ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಈ ಕ್ರಮದಿಂದ ವೈದ್ಯಕೀಯ ಶಿಕ್ಷಣದ ಅಡಳಿತ ಗೊಂದಲ ಮುಕ್ತವಾಗಿ ಸರಳ ಹಾಗೂ ಸುಲಲಿತವಾಗಿದೆ. ಇದರ ಶ್ರೇಯಸ್ಸು ಮಾನ್ಯ ಶ್ರೀ ಜೆ.ಹೆಚ್. ಪಟೇಲ್ ಅವರ ನೇತೃತ್ವದ ಸರ್ಕಾರ ಹಾಗೂ ವೈದ್ಯಕೀಯ ಶಿಕ್ಷಣ ಸಚಿವನಾದ ನನಗೆ ಸೇರಬೇಕಾಗಿರುವುದು ನ್ಯಾಯೋಜಿತ".

+ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಈ ವೈದ್ಯಕೀಯ ಸೀಟು ಹಗರಣದ ಶ್ರೇಯಸ್ಸು ನನಗೂ ಮತ್ತು ಮುಖ್ಯಮಂತ್ರಿಗಳಿಗೆ ಸೇರಬೇಕು ಎಂದು. ಹಗರಣದ ಶ್ರೇಯಸ್ಸು ಇವರಿಬ್ಬರಿಗೆ ಸಲ್ಲಬೇಕೆಂದು ನಾನು ಭಾವಿಸುತ್ತೇನೆ. ಏಕೆಂದರೆ ಸುಪ್ರೀಂ ಕೋರ್ಟು ತುಂಬಾ ಸ್ಪಷ್ಟವಾಗಿ ಹೇಳಿದೆ.

ಉಪಾಧ್ಯಕ್ಷರು : ಈಗ ಡಿಸ್ಕಷನ್ ಏಕೆ?

ಶ್ರೀ ಕೆ.ಎಸ್ ಈಶ್ವರಪ್ಪ : ಕೊಟ್ಟಿರುವ ಉತ್ತರ ಬರೀ ಸುಳ್ಳು ಉತ್ತರ. ಆ ಉತ್ತರಕ್ಕೂ ಇಲ್ಲಿ ಪ್ರಾಕ್ಟಿಕಲ್ ಆಗಿ ಮಾಡಿರುವ ದ್ರೋಹಕ್ಕೂ ಅರ್ಥಾತ್ ಸಂಬಂಧವಿಲ್ಲ. ನಾನೇನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಸುಪ್ರೀಂ ಕೋರ್ಟು ತುಂಬಾ ಸ್ಪಷ್ಟವಾಗಿ ಹೇಳಿದೆ. ಇವರೂ ಕೂಡ ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಇಬ್ಬರು ಅಧಿಕಾರಿಗಳ ಮೇಲೆ ಮತ್ತು ಒಬ್ಬ ಎಫ್.ಡಿ.ಎ. ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿ. ತುಂಬಾ ಸಂತೋಷ. ಸುಪ್ರೀಂ ಕೋರ್ಟು ಹೇಳಿದೆ, ಯಾವ ವ್ಯಕ್ತಿ ತಪ್ಪು ಮಾಡಿದ್ದಾರೆ ಆ ಡಾಕ್ಟರ್ ಕಾಂತಾ ಎನ್ನುವವರು. ಅವರ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಅವರ ಮೇಲೆ ಕ್ರಮ ತೆಗದುಕೊಳ್ಳಬೇಕೆಂದು ಹೇಳಿದ್ದಾರೆ, ಇವರು ಆ ಬಗ್ಗೆ ಕ್ರಮ ತೆಗೆದುಕೊಳ್ಳುವ ಪ್ರಯತ್ನವನ್ನೇ ನಡೆಸಿಲ್ಲ. ನಾನು ಅದಕ್ಕೋಸ್ಕರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸುಪ್ರೀಂ ಕೋರ್ಟು ತುಂಬಾ ಸ್ಪಷ್ಟವಾಗಿ ಇವರಿಗೆ ಹೇಳುತ್ತಿದೆ. "ಅವರ ಪ್ರಮೋಷನ್ ವಿತ್‌ಡ್ರಾ ಮಾಡಿ ಎಂದು ಹೇಳಿದ್ದಾರೆ. ಇವರು ಯಾರಿಗೆ ಪ್ರಮೋಷನ್ ಕೊಟ್ಟಿದ್ದಾರೋ ಅವರ ಪ್ರಮೋಷನನ್ನು ವಿತ್‌ಡ್ರಾ ಮಾಡಿ ಎಂದು ಸುಪ್ರೀಂ ಕೋರ್ಟು ಹೇಳಿದ್ದರೂ ಕೂಡ ಸುಪ್ರೀಂ ಕೋರ್ಟು ಮಾತನ್ನು ಇವರು ಕೇಳಿಲ್ಲ. ಇವರು ಹೇಳಿಕೊಳ್ಳುತ್ತಿದ್ದಾರೆ, ಇದು ನನ್ನ ಕಾಲದಲ್ಲಿ ಆಗಿಲ್ಲ ಎಂದು ಹೇಳಿ. ಇವರು ಇಲ್ಲದೇ ಇರುವ ಸಂದರ್ಭದಲ್ಲಿ ಹಿಂದಿನ ಮಂತ್ರಿಗಳ ಕಾಲದಲ್ಲಿ ಯಾರ್ಯಾರು ತಪ್ಪು ಮಾಡಿದ್ದಾರೋ ಆ ತಪ್ಪು ಮಾಡಿರುವ ವ್ಯಕ್ತಿಗಳಲ್ಲಿ ಕೆಲವರಿಗೆ ಮಾತ್ರ ಇವರು ಅವರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಏಕೆ ಡಾಕ್ಟರ್ ಕಾಂತಾರವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ? ಸುಪ್ರೀಂಕೋರ್ಟೇ ಈ 4 ಜನರೂ ಒಟ್ಟೊಟ್ಟಿಗೇ

ಸೇರಿಯೇ ತಪ್ಪು ಮಾಡಿದ್ದಾರೆಂದು ಸ್ಪಷ್ಟವಾಗಿ ಹೇಳಿದೆ. ನಾನು ಅವರ ಬಗ್ಗೆ ಇಲ್ಲಿ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ಡಾ॥ ಕಾಂತರವರ ಮೇಲೆ ಕ್ರಮ ತೆಗೆದುಕೊಳ್ಳುವ ಬದಲು ಪ್ರಮೋಷನ್ ಕೊಟ್ಟುಕಳುಹಿಸಿದರು, ಇದಕ್ಕೆ ಏನು ಕಾರಣ? ಸ್ವತಃ ಡಾ. ಕಾಂತರವರೇ ಸುಪ್ರೀಂಕೋರ್ಟ್‌ಗೆ ಕೊಟ್ಟಿರುವ ಅಫಿಡೆವಿಟ್‌ನಲ್ಲಿ ನಾನು ತಪ್ಪು ಮಾಡಿರುವುದು ನಿಜವೆಂದು ಹೇಳಿದ್ದಾರೆ. ಅವರ ಅಫಿಡೆವಿಟ್ ಕಾಪಿ ನನ್ನ ಬಳಿ ಇದೆ. ಆದರೆ ಸರ್ಕಾರದವರು ಅವರು ತಪ್ಪೇ ಮಾಡಿಲ್ಲವೆನ್ನುವ ಹಾಗೆ ಹೇಳಿ, ಒಂದು ವೇಳೆ ತಪ್ಪು ಮಾಡಿರುವುದು ನಿಜವೇ ಆಗಿದ್ದಲ್ಲಿ ರಾಜ್ಯಪಾಲರು ಬೇಕಾದರೆ ಕ್ರಮ ತೆಗೆದುಕೊಳ್ಳಲಿ ಎಂದು ರಾಜ್ಯಪಾಲರಿಗೆ ಕಳುಹಿಸಿದ್ದೇವೆ ಎಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ ಇವರಿಗೆ ಡಾ॥ ಕಾಂತರವರ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರ ಇವರಿಗಿಲ್ಲವೆಂದು ಹೇಳಿ ರಾಜ್ಯಪಾಲರಿಗೆ ಕಳುಹಿಸಿರುವಾಗ ಕಡೇ ಪಕ್ಷ ಇವರು ಏನು ಪ್ರಮೋಷನ್‌ನನ್ನು ಡಾ॥ ಕಾಂತರವರಿಗೆ ಕೊಟ್ಟಿದ್ದಾರೆ ಅದು ಸರಿ ಇಲ್ಲವೆಂದು ಕೋರ್ಟ್‌ಗೆ ಹೇಳಿ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸೂಚಿಸಿರುವಾಗ ಅಂಥ ಅಧಿಕಾರ ಸರ್ಕಾರಕ್ಕಿದೆ ಎನ್ನುವ ಮಾತನ್ನು ಕೋರ್ಟ್ ಹೇಳಿದೆಯೋ ಇಲ್ಲವೋ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ನಮಗೆ ಹೇಳಬೇಕು. ಇನ್ನು ಎರಡನೆಯದಾಗಿ ಏಮ್.ಸಿ.ಐ. ನಿಂದ 1995-96ರ ಸಾಲಿಗೆ 150 ಸೀಟ್‌ಗಳ ಅಡ್ಮಿಷನ್‌ಗೆ ಪರ್ಮಿಷನ್ ಕೊಟ್ಟಿದ್ದರೂ ಕೂಡ ಇವರು 171 ಸೀಟ್‌ಗಳನ್ನು ತೆಗೆದುಕೊಂಡಿದ್ದಾರೆ. ಅವರ ರಿಜಿಸ್ಟರ್ ನಂಬರ್‌ಗಳು ನನ್ನ ಬಳಿ ಇವೆ. ಇವರು ನಿಜವಾಗಿಯೂ ಫೇಕ್ ರಿಜಿಸ್ಟರ್ ನಂಬರ್‌ಗಳನ್ನು ಕೊಟ್ಟಿಲ್ಲವೆ? ಇವರ ಸರ್ಕಾರದಲ್ಲಿಯೇ ಆ 21 ಜನರ ಬಗ್ಗೆ ಯೂನಿವರ್ಸಿಟಿಯಲ್ಲಿ ಕ್ಲಾರಿಫಿಕೇಷನ್ ಕೇಳಿದ್ದಾರೆ. ಕೊನೆಗೆ ಈ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಿಸಬಾರದು ಎಂದು ಅಬ್ಜೆಕ್ಷನ್ ರೈಸ್ ಆಗಿದೆ. ಆದರೂ ಅವರು ಕೊನೆಗೆ ಪರೀಕ್ಷೆಯನ್ನು ನಡೆಸಿಬಿಟ್ಟರು, ಪರೀಕ್ಷೆಯಂತೂ ಮಾಡಿರುವುದರಿಂದ ಕಡೇ ಪಕ್ಷ ಅವರ ಫಲಿತಾಂಶವನ್ನು ಪ್ರಕಟಿಸಬಾರದು ಎಂದಾಯಿತು. ಹೀಗಿದ್ದರೂ ಫಲಿತಾಂಶವನ್ನೂ ಅನೌನ್ಸ್ ಮಾಡಿದ್ದಾರೆ. ಇವೆಲ್ಲಾ ಈ ಸರ್ಕಾರದ ಅವಧಿಯಲ್ಲಿಯೇ ಆಗಿರುವುದು. ನಾನು ಇದರ ಬಗ್ಗೆ ಸ್ಪಷ್ಟವಾಗಿ ಸರ್ಕಾರದವರನ್ನು ಕೇಳುತ್ತೇನೆ. ಈ 21 ವಿದ್ಯಾರ್ಥಿಗಳಿಗೆ ಫೇಕ್ ಅಡ್ಮಿಷನ್ ಟಿಕೆಟ್ ಕೊಟ್ಟಿರುವುದು ಹೌದೋ ಅಥವಾ ಅಲ್ಲವೋ? ಅವರನ್ನು ಪರೀಕ್ಷೆಗೆ ಕೂರಿಸಿರುವುದು ನಿಜವೋ, ಸುಳ್ಳೋ? ಕಡೆಗೆ ಫಲಿತಾಂಶವನ್ನು ಪ್ರಕಟಿಸಲು ನೀವು ಕಾರಣರೋ ಅಥವಾ ಇಲ್ಲವೋ ಎಂಬ ಬಗ್ಗೆ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಸನ್ಮಾನ್ಯ ಅಧ್ಯಕ್ಷರೇ, ನಾನು ನಿಯಮ 69ರಡಿಯಲ್ಲಿ ಈ ವಿಷಯದ ಬಗ್ಗೆ ಚರ್ಚೆಗೆ ತಂದಂಥ ಉದ್ದೇಶ ಏನೆಂದರೆ ಲಿಖಿತ ರೂಪದಲ್ಲಿ ನಮಗೆ ಉತ್ತರ ಬೇಕು ಎಂಬುದೇ ಆಗಿತ್ತು. ಮಾನ್ಯ ಮಂತ್ರಿಗಳು ಲಿಖಿತ ರೂಪದಲ್ಲಿ ಕೊಟ್ಟಿರುವ ಒಂದೊಂದು ಮಾಹಿತಿಯೂ ಬರೇ ತಪ್ಪಾಗಿದೆ. ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಮಾಹಿತಿಯಲ್ಲಿ ಪ್ಯಾರಾ ನಂಬರ್ ಮೂರರಲ್ಲಿ ಏನು ಹೇಳಿದ್ದಾರೆಂದರೆ ಲೋಕಾಯುಕ್ತ ದಿನಾಂಕ 27-7-95ರಂದು ಆರೋಗ್ಯ ಕಾರ್ಯದರ್ಶಿಯವರಿಗೆ ಒಂದು ಪತ್ರವನ್ನು ಬರೆದು ಅದರಲ್ಲಿ ಕೇವಲ ಇಬ್ಬರನ್ನು ಮಾತ್ರ ಸೂಚಿಸಿದ್ದೀರಿ; ಆ ಪತ್ರ ನನ್ನ ಬಳಿ ಇದೆ ಅದನ್ನು ನಾನು ಓದುತ್ತೇನೆ, ಇದರಲ್ಲಿ ಯಾರ ಹೆಸರಿದೆ ಎನ್ನುವಂಥದ್ದನ್ನು ತಾವು ದಯವಿಟ್ಟು ಕೇಳಿ.

(ಗೊಂದಲ)

ಉಪಾಧ್ಯಕ್ಷರು : ನೀವು ಕೇವಲ ಕ್ಲಾರಿಫಿಕೇಷನ್ ಕೇಳಬೇಕೇ ಹೊರತು ಓದಿಕೊಂಡು ಹೋಗುತ್ತಾ ಹೋದರೆ ಕೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಯಾವುದೇ ಒಬ್ಬ ಸದಸ್ಯರು ಇಂಥ ಗಂಭೀರ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚೆಯೇ ಸಾಕಷ್ಟು ಅಧ್ಯಯನ ಮಾಡಿಕೊಂಡೇ ರೂಲ್ 69ರ ಅಡಿಯಲ್ಲಿ ಪ್ರಸ್ತಾಪ ಮಾಡುತ್ತಾರೆ.

ಉಪಾಧ್ಯಕ್ಷರು : ಆ ರೀತಿಯಲ್ಲಿ ಪ್ರಸ್ತಾಪ ಮಾಡಿರುವುದರಿಂದಲೇ ಅದಕ್ಕೆ ಉತ್ತರವನ್ನು ಮಂತ್ರಿಗಳು ಕೊಟ್ಟಿದ್ದಾರೆ. ಅದರ ಮೇಲೆ ಕೇವಲ ಕ್ಲಾರಿಫಿಕೇಷನ್ ಕೇಳಬೇಕಷ್ಟೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾಡಿರುವ ತಪ್ಪಿಗಿಂತ ಇನ್ನೂ ಹೆಚ್ಚು ಅಪರಾಧ ಮಾಡಿರುವಂಥ ರೀತಿಯಲ್ಲಿ ಅವರು ಉತ್ತರ ಕೊಟ್ಟರೆ ನಾವೇನು ಮಾಡಬೇಕು.

ಉಪಾಧ್ಯಕ್ಷರು : ಅದಕ್ಕೇ ನಾನು ಹೇಳಿದ್ದು ಕೇವಲ ಕ್ಲಾರಿಫಿಕೇಷನ್ ಕೇಳಿ ಎಂದು. ಆದರೆ ನೀವು ಒಮ್ಮೆಲೆ ಎಷ್ಟು ಮಂದಿ ಕ್ಲಾರಿಫಿಕೇಷನ್ ಕೇಳುವುದು. ಕೇವಲ ಇದೊಂದೇ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದ್ದರೆ ಮುಂದಿನ ಬಿಸಿನೆಸ್‌ಗೆ ನಾವು ಹೋಗಬೇಕೋ ಅಥವಾ ಬೇಡವೋ ಹೇಳಿ?

ಶ್ರೀ ಕೆ.ಎಸ್. ಈಶ್ವರಪ್ಪ : ಉಪಾಧ್ಯಕ್ಷರೇ, ಅವಸರ ಮಾಡಬೇಡಿ. ಈ ಸರ್ಕಾರ ಮಾಡಿರುವ ಅನ್ಯಾಯದ ಬಗ್ಗೆ ನಾವು ಡಾಕ್ಯುಮೆಂಟ್ಸ್ ಕಲೆಕ್ಟ್ ಮಾಡಿದ್ದೇವೆ. ಮಲೇಶಿಯಾದ ಪ್ರಧಾನಮಂತ್ರಿಗಳು ಈ ದೇಶದಲ್ಲಿ ನಡೆಯಬಾರದ್ದು ನಡೆಯುತ್ತಿದೆಯೆಂದು ಹೇಳುತ್ತಿದ್ದಾರೆ. ಆ ಪ್ರಧಾನಮಂತ್ರಿ ನಮ್ಮ ದೇಶವನ್ನು ಹರಾಜಿಗೆ ಹಾಕುತ್ತಿದ್ದಾರೆ. ಹೀಗಿರುವಾಗ ಈ ಮಂತ್ರಿ ರಾಜೀನಾಮೆ ಕೊಡಬೇಕೋ, ಬೇಡವೋ ಎಂಬುದನ್ನು ನೀವು ಹೇಳಿ ನೋಡೋಣ. ನಮ್ಮ ಹತ್ತಿರ ಈ ಸರ್ಕಾರ ಮಾಡಿರುವ ಅನ್ಯಾಯದ ಬಗ್ಗೆ ಡಾಕ್ಯುಮೆಂಟ್ಸ್ ಇದೆ, ಇದನ್ನು ತಮಗೆ ಕೊಡುತ್ತೇವೆ, ನೀವು ನಮಗೆ ಚರ್ಚೆಗೆ ಅವಕಾಶ ಕೊಟ್ಟರೆ ಮಾತ್ರ ನಾವು ಇಲ್ಲಿರುತ್ತೇವೆ, ಅದನ್ನು ಬಿಟ್ಟು ಈಗಾಗಲೇ ಮಂತ್ರಿಗಳು ಕೊಟ್ಟಿರುವ ಲಿಖಿತ ಉತ್ತರವನ್ನೇ ತೆಗೆದುಕೊಳ್ಳಬೇಕು ಎಂದರೆ ಆದರಲ್ಲಿ ಅರ್ಥವಿರುವುದಿಲ್ಲ. ದಯವಿಟ್ಟು ನಮಗೆ ಚರ್ಚೆ ಮಾಡಲು ಅವಕಾಶ ಕೊಡಿ. ಎಲ್ಲಾ ಡಾಕ್ಯುಮೆಂಟ್ಸ್‌ನ್ನೂ ತಮ್ಮ ಮುಂದೆ ಇಡುತ್ತೇವೆ. ಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕೆಂದು ನಾವು ಹೇಳುತ್ತಿದ್ದೇವೆ. ಅವರು ಏಕೆ ರಾಜೀನಾಮೆಯನ್ನು ಕೊಡಬೇಕು ಎಂಬುದನ್ನು ಡಾಕ್ಯುಮೆಂಟ್ಸ್ ಇಟ್ಟುಕೊಂಡು ನಾವು ಹೇಳುತ್ತೇವೆ.

(ಗೊಂದಲ)

ಶ್ರೀ ವಿ. ಸೋಮಣ್ಣ (ಬಂಧೀಖಾನೆ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ಈಗಾಗಲೇ ಮಾನ್ಯಮಂತ್ರಿಗಳು ಸ್ಪಷ್ಟೀಕರಣವನ್ನು ನೀಡಿದ್ದಾರೆ. 1993-94ರಲ್ಲಿ ಆದಂಥ ಘಟನೆ ಬಗ್ಗೆ ಕೂಲಂಕುಷವಾಗಿ ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ಯಾವ್ಯಾವ ರೀತಿಯಲ್ಲಿ ಕಠಿಣ ಕ್ರಮವನ್ನು

ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತೆಗೆದುಕೊಂಡಿದೆ. ಅದನ್ನು ಕೇಳುವುದನ್ನು ಬಿಟ್ಟು ಸರ್ಕಾರ ರಾಜೀನಾಮೆ ಕೊಡಬೇಕು ಎಂದರೆ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ : ಸರ್ಕಾರ ರಾಜೀನಾಮೆ ಕೊಡಬೇಕು ಎಂದು ನಾವು ಹೇಳಲಿಲ್ಲ. ಸಧ್ಯಕ್ಕೆ ರಾಜೀನಾಮೆಯನ್ನು ಮಂತ್ರಿಗಳು ಕೊಡಲಿ. ಆಮೇಲೆ ನಾವು ನಿಮ್ಮ ಬಳಿ ಬರುತ್ತೇವೆ.

ಡಾ॥ ಎಂ.ಪಿ. ಕರ್ಕಿ : ಮಾನ್ಯ ಉಪಾಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್‌ನಲ್ಲಿ ನಾನು ಹೇಳುವುದೇನೆಂದರೆ.

ಉಪಾಧ್ಯಕ್ಷರು : ರಾಮದಾಸ್‌ರವರೇ, ನೀವು ಕುಳಿತುಕೊಳ್ಳಿ, ಕರ್ಕಿಯವರು ಪಾಯಿಂಟ್ ಆಫ್ ಆರ್ಡರ್ ಹೇಳಿದ್ದಾರೆ.

ಡಾ॥ ಎಂ.ಪಿ. ಕರ್ಕಿ : ಮಾನ್ಯ ಉಪಾಧ್ಯಕ್ಷರೇ, ರೂಲ್ 69ರಲ್ಲಿ ಇರುವುದು ಏನೆಂದರೆ, `` Any Member desirous of raising a discussion.." It is not a statement. ``.. discussion on a matter of urgent public importance". Discussion is more important. This has to be discussed. ಆದುದರಿಂದ ಮಂತ್ರಿಗಳು ಹೇಳಿದ ಸ್ಟೇಟ್‌ಮೆಂಟನ್ನು ನಂಬಿ ನಾವು ಸುಮ್ಮನೇ ಕೂರುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು : ಅಂದು ನೀವು ಲಿಖಿತ ಹೇಳಿಕೆ ಬೇಕು ಎಂದು ಕೇಳಿದ್ದೀರಿ. ಆ ಪ್ರಕಾರ ಲಿಖಿತ ಹೇಳಿಕೆ ಕೊಟ್ಟಿರುವುದರಿಂದ ಇಲ್ಲಿಗೇ ಅದು ಮುಕ್ತಾಯವಾಯಿತು.

ಡಾ॥ ಎಂ.ಪಿ. ಕರ್ಕಿ : ಅದರಲ್ಲಿ ಏನು ಹೇಳಿದೆಯೆಂದರೆ, `` Any member desiring of raising a discussion on a matter of urgent public importance may give notice in writing to the Secretary specifying clearly and precisely the matter to be raised". It is raising discussion. It is not raising matter. ಡಿಸ್‌ಕಷನ್ ಎಂದು ಹೇಳಿರುವುದರಿಂದ ಮಂತ್ರಿಗಳು ಮೊದಲ ಉತ್ತರ ಹೇಳಿದ ಮೇಲೆ ಮತ್ತೆ ಸದಸ್ಯರು ಪ್ರಶ್ನೆ ಕೇಳಬೇಕು. ಈಗ ಗಮನ ಸೆಳೆಯುವ ಸೂಚನೆಯಲ್ಲಿ ಸಂಬಂಧಪಟ್ಟ ಮಂತ್ರಿಗಳಿಗೆ ಗಮನ ಸೆಳೆದಾಗ ಅವರು ಉತ್ತರ ಕೊಟ್ಟಮೇಲೆ ಒಂದೆರಡು ಕ್ಲಾರಿಫಿಕೇಷನ್ ಕೇಳಬಹುದು. ಆದರೆ ರೂಲ್ 69ಕೆಳಗಡೆ ಚರ್ಚೆ ವ್ಯಾಪಕವಾಗಿರತಕ್ಕಂಥದ್ದು, ಆದುದರಿಂದ ನಾವು ಮಂತ್ರಿಗಳು ಹೇಳಿದ್ದನ್ನೇ ಅಂತಿಮ ಎಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಅಲ್ಲಿಗೇ ಮುಗಿಸುವುದಕ್ಕಾಗುವುದಿಲ್ಲ. Rule 69 is not similar to Calling Attention. Here discussion is allowed. Suppose there is a lacuna in the statement, suppose there is something wrong in the statement, we can raise it in the House.

ಉಪಾಧ್ಯಕ್ಷರು : ತಾವು ಕೇಳಿದ್ದು ರೂಲ್ 345 ಕೆಳಗಡೆ ಹೊರತು ರೂಲ್ 69ರಡಿಯಲ್ಲಿ ಅಲ್ಲ. ನೀವು ಓದಿ.

ಶ್ರೀ ಡಿ.ವಿ. ಸದಾನಂದಗೌಡ : ಮಂತ್ರಿಗಳು ಕೊಟ್ಟ ಉತ್ತರದಲ್ಲಿಯೇ ಹೇಳಿದೆ. ನಿಯಮ 69ರಡಿಯಲ್ಲಿ ಮಾನ್ಯ ವಿಧಾನಸಭಾ ಸದಸ್ಯರಾದ ಈಶ್ವರಪ್ಪ, ರಾಮದಾಸ್, ಸದಾನಂದಗೌಡ ಮತ್ತು ಜಯರಾಮಶೆಟ್ಟಿಯವರು 1993-94ನೇ ಸಾಲಿನಲ್ಲಿ ಸೀಟ್ ಅಲಾಟ್‌ಮೆಂಟ್‌ನಲ್ಲಿ ನಡೆದಿರುವ ಪ್ರಕರಣದ ಬಗ್ಗೆ ಸ್ಪಷ್ಟೀಕರಣ ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು : ಈಗ ಚರ್ಚೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಕರ್ನಾಟಕ ರಾಜ್ಯದ ಪ್ರತಿಭಾವಂತರುಗಳಾದ ವಿದ್ಯಾರ್ಥಿಗಳ ಪ್ರಶ್ನೆ ಇದರಲ್ಲಿ ಬರುತ್ತದೆ. ಕರ್ನಾಟಕ ರಾಜ್ಯದಲ್ಲಿ ಕಾನೂನು ಇದೆಯೋ ಅಥವಾ ಇಲ್ಲವೋ ಎನ್ನುವಂಥ ಪ್ರಶ್ನೆ ಇದರಲ್ಲಿ ಬರುತ್ತದೆ. ರಾಜ್ಯದ ಮರ್ಯಾದೆಯ ಪ್ರಶ್ನೆ ಇದಾಗಿದೆ. ಕರ್ನಾಟಕ ರಾಜ್ಯದಲ್ಲಿ ಕಾನೂನು ಇಲ್ಲವೇ?

ಡಾ|| ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಅಂದು ನಾನು ಚರ್ಚೆಗೆ ರೆಡಿಯಾಗಿದ್ದೇನೆಯಾದ ಕಾರಣ ಉತ್ತರವನ್ನು ಕೊಡುತ್ತೇವೆ ಎಂದಾಗ ಅವರು ಲಿಖಿತ ಹೇಳಿಕೆ ಕೇಳಿದರು. ಆ ಪ್ರಕಾರ ಹೇಳಿಕೆ ಕೊಟ್ಟಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಂದು ನಾನು ಮೊದಲು ಲಿಖಿತ ಹೇಳಿಕೆ ಬರಲಿ, ಅದನ್ನು ನೋಡಿ ಮುಂದೆ ಚರ್ಚೆ ಮಾಡೋಣ ಎಂದು ಹೇಳಿದ್ದೆ. ಆದರೆ ಈ ರೀತಿಯ ಸ್ಟೇಟ್‌ಮೆಂಟನ್ನು ತೆಗೆದುಕೊಂಡು ನಾವು ಮನೆಗೆ ಹೋಗಬೇಕೇನು?

4.30 ಪಿ.ಎಂ

ಉಪಾಧ್ಯಕ್ಷರು : ಅವರು ಕ್ಲಾರಿಫಿಕೇಷನ್ ಕೇಳಿದರೆ ಮುಗಿದುಹೋಗುತ್ತದೆ. ಆದರೆ ಅದನ್ನು ಬಿಟ್ಟು ಎಲ್ಲಾ ಮಾತನಾಡಿಕೊಂಡು ಕುಳಿತರೆ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಇಷ್ಟೊಂದು ದಾಖಲೆಗಳನ್ನು ತಂದಿದ್ದೇವೆ. ಹಾಗಿದ್ದಮೇಲೆ ಕೇವಲ ಕ್ಲಾರಿಫಿಕೇಷನ್ ಕೇಳಿದರೆ ಏನು ಪ್ರಯೋಜನ? ಕೋರ್ಟ್ ಏನು ಹೇಳಿದೆ; ಲೋಕಾಯುಕ್ತದವರು ಏನು ಹೇಳಿದ್ದಾರೆ ಎಲ್ಲದರ ಬಗ್ಗೆ ದಾಖಲೆಗಳನ್ನು ತಂದಿದ್ದೇವೆ. ಯಾವರೀತಿ ಅವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ, ಅಫಿಡೆವಿಟ್ ಏನೇನು ಕೊಟ್ಟಿದ್ದಾರೆ ಎಲ್ಲದರ ಬಗ್ಗೆ ದಾಖಲೆಗಳನ್ನು ತಂದಿದ್ದೇವೆ. ಆದ್ದರಿಂದ ನಮಗೆ ಇದರ ಬಗ್ಗೆ ಚರ್ಚೆ ಮಾಡಲು ದಯಮಾಡಿ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು : ಒಮ್ಮೆ ಸಚಿವರು ಉತ್ತರವನ್ನು ಕೊಟ್ಟಮೇಲೆ ವಿಧಾನಸಭಾ ಅಧ್ಯಕ್ಷರ ಅಪ್ಪಣೆ ಪಡೆದು ಸಾರ್ವಜನಿಕ ಮಹತ್ವದ ವಿಚಾರದ ಮೇಲೆ ಹೇಳಿಕೆ ನೀಡಬಹುದು. ಅಂತಹ ಹೇಳಿಕೆಯ ಮೇಲೆ ಯಾವುದೇ ಚರ್ಚೆಗೆ ಸದಸ್ಯರಿಗೆ ಅವಕಾಶ ಇರತಕ್ಕದ್ದಲ್ಲ. ಆದರೆ ರಾಜ್ಯಕ್ಕೆ ಸಂಬಂಧಪಟ್ಟಂತೆ ಬಹಳ ಮಹತ್ವದ ವಿಚಾರವಿದ್ದರೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳುವ ಉದ್ದೇಶದಿಂದ ಸದಸ್ಯರಿಗೆ ಚರ್ಚೆಗೆ ಅನುಮತಿ ನೀಡಬಹುದು ಎಂದು ನಿಯಮವಿದೆ. ಆದ್ದರಿಂದ ತಾವು ಕೇವಲ ಕ್ಲಾರಿಫಿಕೇಷನ್ ಕೇಳಬಹುದು, ಅದನ್ನು ಬಿಟ್ಟು ಹತ್ತು ಮಂದಿ ಕ್ಲಾರಿಫಿಕೇಷನ್ ಕೇಳುತ್ತಾರೆಂದರೆ ಹೇಗೆ? ಯಾರಾದರೂ ಒಬ್ಬರು ಕೇಳಬಹುದು.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೆ, ಲೋಕಾಯುಕ್ತದವರು ಕೊಟ್ಟಂಥ ವರದಿಯ ಪ್ಯಾರ ಮೂರರಲ್ಲಿ ಕಾಂತರವರ ಮೇಲೆ ಸೆಕ್ಷನ್ 120 420, 468ರ ಪ್ರಕಾರದಲ್ಲಿ ಕೇಸನ್ನು ದಾಖಲು ಮಾಡಿರುವುದು ಇದೆಯೋ ಇಲ್ಲವೋ ಎಂಬುದು ಮೊದಲನೆಯ ಕ್ಲಾರಿಫಿಕೇಷನ್. ಎರಡನೆಯ ವಿಚಾರವೇನೆಂದರೆ, ಎರಡನೆ ಪೇಜ್‌ನ ಮೂರನೇ ಪ್ಯಾರಾದಲ್ಲಿ ದೋಷಿಗಳೆಂದು ನಿರ್ಧರಿಸಿರುವ ವಿಚಾರದ ಬಗ್ಗೆ ಹೇಳಿದ್ದೀರಿ. ಆದರೆ ಮಹೇಶ್ ಹೆಗಡೆಯವರ ವಿಚಾರಣೆಯ ಬಗ್ಗೆ ಕೇಳಿದ್ದೆವು, ಆದರೆ ತಾವು ಅದರ ಬಗ್ಗೆ ಏನೂ ಹೇಳಿಲ್ಲ. ಮಹೇಶ್ ಹೆಗಡೆಯವರ ವಿಚಾರಣೆಯ ವರದಿಯಲ್ಲಿ27 ಪುಟಗಳ ಸಂಪೂರ್ಣವಾದ ವರದಿಯನ್ನು ತಮಗೆ ಕೊಟ್ಟಿರುವುದು ನಿಜವೇ? ಆ ವರದಿಯಲ್ಲಿ :

``The petitioners secured admission by furnishing incorrect ranking in collusion with the Selection scrutiny committee including the chairman are equalliy quilty". ಎಂದು ವರದಿ ಬಂದಿರುವುದು ನಿಜವೇ? ಮೂರನೆಯದಾಗಿ, ತಾವು ಇಲ್ಲಿ ಪ್ರಸ್ತಾಪವನ್ನು ಮಾಡುತ್ತಾ ಇದಕ್ಕೆ ಸಂಬಂಧಪಟ್ಟಂತೆ ತಪ್ಪು ಮಾಡಿರುವ ವಿದ್ಯಾರ್ಥಿಗಳನ್ನು ತೆಗೆದು ಹಾಕುವ ಬಗ್ಗೆ ಆದೇಶವನ್ನು ಹೊರಡಿಸುವ ಬಗ್ಗೆ ಹೇಳಿದ್ದೀರಿ. ಆದರೆ ಸುಪ್ರೀಮ್ ಕೋರ್ಟ್‌ನ ಆದೇಶದ ಪ್ಯಾರಾ 7 ರಲ್ಲಿ ಇರುವ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿಲ್ಲ. ಪ್ಯಾರ 6ರಲ್ಲಿ ವಿದ್ಯಾರ್ಥಿಗಳನ್ನು ಯಾರು ಗಿಲ್ಟಿ ಎಂದು ಹೇಳಿದ್ದಾರೆ ಅಂಥವರನ್ನು ಶಿಕ್ಷೆಗೆ ಒಳಪಡಿಸುತ್ತೇವೆ, ಅದರ ಜೊತೆಗೆ ಯಾರು ಆಯ್ಕೆ ಸಮಿತಿಯಲ್ಲಿ ಇದ್ದರೋ ಅವರಿಗೂ ಶಿಕ್ಷೆಯಾಗಬೇಕು ಎಂದು ಸುಪ್ರೀಮ್ ಕೋರ್ಟ್ ಹೇಳಿತ್ತು. ಇದು ಸತ್ಯವಾದ ವಿಚಾರವೇ? ಸುಪ್ರೀಮ್ ಕೋರ್ಟ್‌ನ ಆದೇಶದ 7ನೇ ಪ್ಯಾರದಲ್ಲಿ ಏನು ಹೇಳಿದ್ದಾರೆಂದರೆ,

ಉಪಾಧ್ಯಕ್ಷರು : ತಾವು ಹೀಗೆ ಕೇಳಿಕೊಂಡು ಹೋದರೆ ಹೇಗೆ, ಇದು ಸರಿಯಲ್ಲ.

ಶ್ರೀ ಕೆ.ಎನ್. ಈಶ್ವರಪ್ಪ : 420 ನಿಯಮದ ಅಡಿಯಲ್ಲಿ ಕೇಸ್ ಹಾಕಿರುವವರಿಗೆ ಇವರು ಬಡ್ತಿಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಸಚಿವರು ಏನು ಹೇಳುತ್ತಾರೆ ಎಂದು ಸದಸ್ಯರು ಕೇಳುತ್ತಿದ್ದಾರೆ. ಒಂದಲ್ಲ ಹಲವಾರು ತಪ್ಪು ಮಾಡಿದ್ದಾರೆ. ಎಲ್ಲಾ ದಿಕ್ಕು ದಾಖಲೆಗಳಿದೆ, ದಯಮಾಡಿ ಸದಸ್ಯರು ಕೇಳಲು ಅವಕಾಶಮಾಡಿಕೊಡಿ.

ಶ್ರೀ ಎ. ರಾಮದಾಸ್ : ಮಾನ್ಯ ಸಚಿವರೇ ಪೂರ್ಣವಾಗಿ ಉತ್ತರವನ್ನು ಕೊಟ್ಟಿದ್ದರೆ ನಾವು ಕೇಳುತ್ತಿರಲ್ಲಿಲ್ಲ. ಲೋಕಾಯುಕ್ತದ ವರದಿಯ ಪ್ಯಾರಾ 6ರಲ್ಲಿ ಕಾಂತರವರು ಈ ವಿಚಾರದಲ್ಲಿ ಪ್ರಥಮ ಮಾಹಿತಿಯ ವರದಿಯಲ್ಲಿ ಅವರ ಮೇಲೆ ಕೇಸು ಇತ್ತು, ಅನಂತರ ಅವರನ್ನು ಮುಕ್ತವಾಗಿ ಮಾಡಲಾಗಿದೆಯೆಂದು ಹೇಳಿದ್ದಾರೆ. ಸುಪ್ರೀಮ್ ಕೋರ್ಟ್‌ನ ತೀರ್ಮಾನ1997 ರಲ್ಲಿ ಬಂದಿರತಕ್ಕದ್ದು. ಆದರೆ ಅಂದು ಆರೋಗ್ಯ ಇಲಾಖೆಯ ಕಾರ್ಯದರ್ಶಿಯವರು ಒಂದು ತೀರ್ಮಾನ ತೆಗೆದುಕೊಳ್ಳಬೇಕಾದರೆ ಸಚಿವರ ಅನುಮತಿ ಇಲ್ಲದೆ ಹೇಗೆ ತೆಗೆದುಕೊಂಡರು ? ಲೋಕಾಯುಕ್ತದವರು ಕಾಂತರವರನ್ನು ಕನೆವಿಕ್ಟ್ ಮಾಡಿ ಎಫ್. ಐ. ಆರ್. ನಲ್ಲಿ ಹಾಕಿದಮೇಲೆ, ಅವರಿಗೆ ಶಿಕ್ಷೆಯಾಗಬೇಕು ಎಂದು ಮಧ್ಯಾಂತರ ವರದಿಯಲ್ಲಿ ಹೇಳಿದಮೇಲೆ ನಿಮ್ಮ ಕಾರ್ಯದರ್ಶಿಯವರು ಕಾಂತರವರನ್ನು ಮುಕ್ತಗೊಳಿಸಲಾಗಿದೆಯೆಂದು ಹೇಳಲು ಅನುಮತಿ ಕೊಟ್ಟವರು ಯಾರು ? ಇದರ ಬಗ್ಗೆ ತಾವು ಇಲ್ಲಿ ಯಾವುದೆ ವಿಚಾರವನ್ನು ಪ್ರಸ್ತಾಪ

ಮಾಡಿಲ್ಲ. ಮಾನ್ಯ ಸಚಿವರು ಸುಳ್ಳು ಮಾಹಿತಿಯನ್ನು ಕೊಟ್ಟಿರುವುದರಿಂದ ಇವುಗಳೆಲ್ಲದರ ಬಗ್ಗೆ ಕೇಳಲೇ ಬೇಕಾಗಿದೆ. 14-11-95ರಲ್ಲಿ ಇವರನ್ನು ಮುಕ್ತರನ್ನಾಗಿ ಮಾಡಿದ್ದರೆ 1997ರಲ್ಲಿ.

ಉಪಾಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ಹೀಗಾದರೆ ಸದನ ನಡೆಸುವುದು ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ದಾಖಲೆಗಳ ಸಮೇತ ಬಂದಿದ್ದಾರೆ. ನಾವು ಇಲ್ಲಿ ದಾಖಲೆಗಳನ್ನು ಹುಡುಗಾಟ ಮಾಡಲು ತರುತ್ತೇವೆಯೇ? ತಾವು ಹೀಗೆ ಹೇಳಿದರೆ ಹೇಗೆ? ತಮ್ಮ ಸ್ಥಾನಕ್ಕೆ ನಾವು ಗೌರವವನ್ನು ಕೊಡುತ್ತೇವೆ, ನಾವು ದಾಖಲೆಗಳ ಸಮೇತ ಬಂದಿದ್ದೇವೆ, ಹೀಗಿದ್ದರೂ ಚರ್ಚೆಗೆ ಅವಕಾಶ ಕೊಡುವುದಿಲ್ಲರೆಂದರೆ ಹೇಗೆ? ನಾವೇನು ಇಲ್ಲಿ ಆಟವಾಡಲು ಬಂದಿದ್ದೇವೆಯೇ?

ಉಪಾಧ್ಯಕ್ಷರು : ಈ ರೀತಿ ಮಾತನಾಡಿಕೊಂಡು ಹೋದರೆ ಇದು ಕ್ಲಾರಿಫಿಕೇಷನ್ ಕೇಳುವ ಪದ್ಧತಿಯಂತಾಗುತ್ತದೆಯೇ? ಒಂದರೆಡು ಪ್ರಶ್ನೆಗಳನ್ನು ಕೇಳುತ್ತಾರೆ, ಅದಕ್ಕೆ ಸಚಿವರು ಉತ್ತರ ಹೇಳುತ್ತಾರೆ, ಆದರೆ ಈ ರೀತಿ ಕೇಳಿಕೊಂಡು ಹೋದರೆ ಏನು ಅರ್ಥವಾಗುತ್ತದೆ? ಸದನ ನಡೆಸುವುದು ಹೇಗೆ? ಇದು ಸರಿಯಲ್ಲ.

SRI A. RAMADAS : ``The statement filed in respect of different colleges, it is stated, that against some students, names of the students approved under the backlog is a mistake." ಇದು ಕಾಂತಾರವರು ಕೊಟ್ಟಿರುವ ಸ್ಟೇಟ್‌ಮೆಂಟ್. ಇದು ತಪ್ಪು ಎಂದು ಕೋರ್ಟ್‌ನಲ್ಲಿ ಅಫಿಡೆವಿಟ್ ಫೈಲ್ ಮಾಡಿದ್ದಾರೆ.471 ವಿದ್ಯಾರ್ಥಿಗಳಿಗೆ ನಾವು ತಪ್ಪು ಮಾಡಿದ್ದೇವೆಂದು ಅಪಿಡೆವಿಟ್‌ನ್ನು ಹಾಕಿ ಇದರಲ್ಲಿ ನನ್ನ ವಿಚಾರವಿಲ್ಲವೆಂದು ಹೇಳಿದ್ದಾರೆ. ಕೋರ್ಟ್‌ಗೆ ಅಫಿಡೆವಿಟ್‌ನ್ನು ಕೊಟ್ಟಮೇಲೆ ಜೆ.ಜೆ.ಎಂ. ಮೆಡಿಕಲ್ ಕಾಲೇಜಿಗೆ ಇವರೆಯೇ ಒಂದು ಪತ್ರವನ್ನು ಬರೆದು 29 ಹೆಚ್ಚುವರಿ ಸೀಟನ್ನು ರಾಜ್ಯ ಸರ್ಕಾರ ಕೊಟ್ಟಿದೆ. ಇದು ಇವರ ಅವಧಿಯಲ್ಲಾಗಿರುವುದು. ಅಂದು ಇದರ ಬಗ್ಗೆ ಚರ್ಚೆಯಾಗುತ್ತಿರುವಾಗ ಮಾನ್ಯ ಸಚಿವರು ನನ್ನ ಅವಧಿಯಲ್ಲೇನಾದರೂ ಒಂದೇ ಒಂದು ಹೆಚ್ಚು ಸೀಟು ಅಡ್ಮಿಷನ್ ಸೀಟನ್ನು ಕೊಟ್ಟಿರುವ ಬಗ್ಗೆ ತಮ್ಮ ಗಮನಕ್ಕೆ ತರುವುದೇನೆಂದರೆ, 1996ರಲ್ಲಿ ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ 150 ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವ ಬದಲಾಗಿ 171 ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲಾಯಿತು. ಇದರಲ್ಲಿ ಪ್ರಮುಖವಾಗಿ 21 ಸೀಟುಗಳು ಹೆಚ್ಚು ತೆಗೆದುಕೊಳ್ಳಲಾಗಿತ್ತು. ಆ 21 ಮಂದಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕೊಡುವುದಿಲ್ಲವೆಂದು ವಿಶ್ವವಿದ್ಯಾನಿಲಯದವರು ಹೇಳಿದ್ದರು. ಆ ರೀತಿ ವಿಶ್ವವಿದ್ಯಾನಿಲಯದವರು ಹೇಳಿದಮೇಲೆ ರಾಜ್ಯ ಸರ್ಕಾರದ ಸೂಚನೆಯ ಮೇರೆಗೆ ಅವರಿಗೆ ಫೇಕ್ ಅಡ್ಮಿಷನ್ ಟಿಕೇಟ್‌ಗಳನ್ನು ನೀಡಲಾಗಿದೆ. ಅದಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ದಾಖಲೆಗಳು ನಮ್ಮ ಹತ್ತಿರ ಇದೆ. ಇದರಲ್ಲಿ ಮಾನ್ಯ ಸಚಿವರ ಹಸ್ತಕ್ಷೇಪ ಇದ್ದೇ ಇದೆ.

ಉಪಾಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ತಾವು ಇನ್ನೂ ಮಾತನಾಡುತ್ತಾ ಹೋದರೆ ಅದು ಕಡತಕ್ಕೆ ಹೋಗುವುದಿಲ್ಲ. ನಾನು ಹೇಳಿದಂತೆ ಸಂಕ್ಷಿಪ್ತವಾಗಿ ಹೇಳಿ ಮುಗಿಸಿ. ಇಲ್ಲದಿದ್ದರೆ ತಾವು ಹೇಳಿದ್ದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಎ. ರಾಮದಾಸ್ : ಇದು ರಾಜ್ಯದ ಪ್ರಶ್ನೆ, ಕೈಮುಗಿದು ಕೇಳಿಕೊಳ್ಳುತ್ತೇನೆ, ದಯಮಾಡಿ ಅವಕಾಶ ಕೊಡಿ. ಏಕೆ ಕಡತಕ್ಕೆ ಹೋಗುವುದಿಲ್ಲ? 120 ಕೋಟಿ ರೂಪಾಯಿಗಳ ಹಗರಣ. ಮಾನ್ಯ ಸಚಿವರು ಹೇಳಿದ್ದು ಕಡತಕ್ಕೆ ಹೋಗಿದೆ.

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ. ತಾವು ಏನು ಹೇಳಿದರೂ ಕೇಳುವುದಿಲ್ಲವಲ್ಲಾ? ತಾವು ಏನೇ ಮಾತನಾಡಿದರೂ ಕಡತಕ್ಕೆ ಹೋಗುವುದಿಲ್ಲ. ಸಚಿವರು ಉತ್ತರ ಹೇಳುತ್ತಾರೆ, ತಾವು ಕುಳಿತುಕೊಳ್ಳಿ. ಈ ಹಿಂದೆ ಇದರ ಬಗ್ಗೆ ಚರ್ಚೆಗೆ ಬಂದಿದ್ದಾಗ ನಾನು ಅಧ್ಯಕ್ಷರ ಸ್ಥಾನದಲ್ಲಿದೆ, ಇದರ ಬಗ್ಗೆ ಸಾಕಷ್ಟು ಚರ್ಚೆ ಅಂದು ಆಗಿತ್ತು. ಅಂದು ಸಚಿವರಿಂದ ಸ್ಟೇಟ್‌ಮೆಂಟ್ ಕೊಡಿಸಿ ಎಂದು ತಾವು ಕೇಳಿದ್ದೀರಿ, ಅದರಂತೆ ಇಂದು ಸಚಿವರು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಕ್ಲಾರಿಫಿಕೇಷನ್ ಕೇಳುವುದಕ್ಕೂ ಒಂದು ಮಿತಿ ಬೇಡವೇ?

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಉತ್ತರ ತೆಗೆದುಕೊಂಡು ಏನು ಮಾಡಬೇಕು? ಒಂದಾದರೂ ಸರಿಯಾದ ಉತ್ತರ ಕೊಟ್ಟಿಲ್ಲ. ಬರಿ ಸುಳ್ಳು ಉತ್ತರವನ್ನು ಕೊಟ್ಟಿದ್ದಾರೆ. ಅವರು ಸ್ಪಷ್ಟವಾದ ಉತ್ತರ ಕೊಡಲಿ. ಇದು 120 ಕೋಟಿ ರೂಪಾಯಿಗಳ ವ್ಯವಹಾರ. ನಮಗೆ ಚರ್ಚೆಗೆ ಅವಕಾಶ ಕೊಡದಿದ್ದರೆ ಹೇಗೆ?

ಡಾ॥ ಎಂ. ಶಂಕರನಾಯಕ್ : ಸುಳ್ಳು ಉತ್ತರ ಎಂದು ಅವರೇನು ಹೇಳಿದ್ದಾರೆ ಅದು ಸರಿಯಲ್ಲ, ಉತ್ತರ ಕೊಡುವ ಬಗ್ಗೆ ಅವರಿಂದ ನಾನು ಕಲಿತುಕೊಳ್ಳಬೇಕಾಗಿಲ್ಲ.

ಶ್ರೀ ಎ. ರಾಮದಾಸ್ : ನನ್ನ ಹತ್ತಿರ ದಾಖಲೆಗಳು ಇದೆ.

ಉಪಾಧ್ಯಕ್ಷರು : ರಾಮದಾಸ್‌ರವರೇ, ತಾವು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

ಉಪಾಧ್ಯಕ್ಷರು : ನೀವು ಏನು ಹೇಳುತ್ತೀರಿ ಹೀಗೆಯೇ ಉತ್ತರ ಕೊಡಿ ಎಂದು ನಿಮಗೆ ಹೇಳುವುದಕ್ಕಾಗುವುದಿಲ್ಲ. ಸರ್ಕಾರದಲ್ಲಿ ಏನು ಮಾಹಿತಿ ಇರುತ್ತದೆ, ತಮಗೆ ಸಂಬಂಧಪಟ್ಟಂತೆ ಅವರು ಕೊಡುತ್ತಾರೆ. ನನಗೆ ಹೀಗೆ ಕೊಡುವುದಕ್ಕೆ ಹೇಳಿ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಉತ್ತರ ಕೊಟ್ಟರೆ ನೀವು ಕ್ಲಾರಿಫಿಕೇಷನ್ ಕೇಳುವುದು ನಿಮ್ಮ ಕೆಲಸ. ನೀವು ಹೀಗೆಯೇ ಉತ್ತರ ಕೊಡಿಸಿ ಎಂದು ಹೇಳಿದರೆ ಇದು ಫೇರ್ ಮಾಡತಕ್ಕಂಥದ್ದು ಅಲ್ಲ. ತಾವು ದಯಮಾಡಿ ನಿಮ್ಮ ಕೆಲಸ ಸ್ವಲ್ಪ ವಿಚಾರ ಮಾಡಿ ತಾವು ತಮ್ಮ ಸದಸ್ಯರಿಗೆ ಹೇಳಿ, ಈ ರೀತಿ ಮಾಡಿದರೆ ನಾವು ಸದನ ನಡೆಸುವುದು ಹೇಗೆ? ಅನೇಕ ವಿಷಯ ಇದೆ, ಮಹತ್ವದ ವಿಷಯ ಬಿಟ್ಟು ಒಂದೇ ವಿಷಯದ ಬಗ್ಗೆ ಎಷ್ಟು ಹೊತ್ತು ಮಾತನಾಡುವುದು. ಸದನದ ನಿಯಮ ನೀತಿ ಪುಸ್ತಕ ಮಾಡಿದ್ದಾರೆ, ಇದನ್ನು ಓದಿಕೊಂಡು ಬರಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಈ ಉತ್ತರ ಏನು ಕೊಟ್ಟಿದ್ದಾರೆ, ಇದರ ಬಗ್ಗೆ ನಾನು ಡಿಸ್ಕಷನ್‌ಗೆ ಮೋಷನ್ ಮೂವ್ ಮಾಡುತ್ತೇನೆ.

ಉಪಾಧ್ಯಕ್ಷರು : ಈ ಪ್ರಸ್ತಾಪ 21ನೇ ತಾರೀಖಿಗೆ ಆಗಿದೆ, ಒಂದು ಗಂಟೆ ಐದು ನಿಮಿಷ ಮಾತನಾಡಿದ್ದಾರೆ. ಇದಕ್ಕೆ ಎಷ್ಟು ಟೈಮ್ ಇರುತ್ತದೆ, ಈಗ ಮತ್ತೆ ಅರ್ಧ ಗಂಟೆ ಆಯಿತು, ಈ ಸದನದ ಸಮಯ ಎಷ್ಟು ವ್ಯರ್ಥ ಮಾಡುವುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇವರು ಉತ್ತರ ಕೊಟ್ಟಿರುವ ಬಗ್ಗೆ ನಾನು ಡಿಸ್ಕಷನ್ ಮೋಷನ್ ಮೂವ್ ಮಾಡುತ್ತಿದ್ದೇನೆ. ಅವರು ಕೊಟ್ಟಿರುವ ಉತ್ತರ ಸಂಪೂರ್ಣ ಸುಳ್ಳು ಇದೆ. ಅವರು ಕೊಟ್ಟಿರುವ ಮಾಹಿತಿಯೂ ಸಂಪೂರ್ಣವಾಗಿ ಸುಳ್ಳಿದೆ. ಆಡಳಿತದಲ್ಲಿ ನಿಮಗೆ ಗೌತಮ್ ಬಸುರವರು 14.11.1995ರಲ್ಲಿ ಕಾಂತರವರಿಗೆ ಏನು ಪತ್ರ ಬರೆದಿದ್ದಾರೆ, ಲೋಕಾಯುಕ್ತ ನಿಮ್ಮನ್ನು ಎಕ್ಸಾನರೇಟ್ ಮಾಡಿದೆ ಎಂದು ಸುಳ್ಳು ಮಾಹಿತಿ ಕೊಟ್ಟಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಪಾಯಿಂಟ್ ಆಫ್ ಆರ್ಡರ್...

ಶ್ರೀ ಕೆ.ಎಸ್. ಈಶ್ವರಪ್ಪ : ನೋಟೀಸ್ ಮೇಲೆ ಚರ್ಚೆಗೆ ಅವಕಾಶ ಕೊಡುತ್ತೀರಾ?

ಉಪಾಧ್ಯಕ್ಷರು : ಅವರು ನೋಟೀಸ್ ಕೊಡಲಿ ಆ ಮೇಲೆ ನೋಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ನೋಟೀಸ್ ಮೇಲೆ ಚರ್ಚೆಗೆ ಅವಕಾಶ ಕೊಡಿ ಎಂದರೆ ನೋಡೋಣವೆಂದು ಹೇಳುತ್ತೀರಿ.

ಉಪಾಧ್ಯಕ್ಷರು : ನೀವು ಯಾವ ರೀತಿ ನೋಟಿಸ್ ಕೊಡುತ್ತೀರಿ ಅದನ್ನು ನೋಡಿದೆ ನಾವು ಹೇಗೆ ಹೇಳುವುದು?

ಕೆ.ಎಸ್. ಈಶ್ವರಪ್ಪ : ನಮಗೆ ಅವರು ಬರೀ ಸುಳ್ಳು ಉತ್ತರ ಕೊಟ್ಟಿದ್ದಾರೆ . 120 ಕೋಟಿ ರೂಪಾಯಿ ಅವ್ಯವಹಾರವಾಗಿದೆ. ಅವರು ಕೊಟ್ಟಿರುವ ಉತ್ತರದ ವಿರುದ್ಧ ನಾವು ಧರಣಿ ಸತ್ಯಾಗ್ರಹ ಮಾಡುತ್ತೇವೆ.

SRI K.N.NAGEGOWDA : You are a learned senior Member. Kindly listen the point of order raised by me. When Ispeak on a point to order, you are asking learned hon. Member Smt. Pramila to speak. Are you following the procedure of this House? Now, Government will make a statement, ಆ ಸ್ಟೇಟ್‌ಮೆಂಟ್ ಬಗ್ಗೆ ತಪ್ಪು ಮಾಹಿತಿ ಇದ್ದರೆ, ಸ್ಟೇಟ್‌ಮೆಂಟ್ ಸರಿ ಇಲ್ಲದೇ ಇದ್ದರೆ ಪ್ರಿವಿಲೇಜ್ ಮೂವ್ ಮಾಡುವುದಕ್ಕೆ ಪವರ್‌ಫುಲ್ ರೂಲ್ ಇದೆ. They cannot say suo-moto that it is a false statement. If it is a falsse statement, if they concider it is a false statement, let them give a Privilege Motion. The House got the power to consider that notice and the House can refer it tio the Privillege Committe. Therfore, Suo-moto a Member cannot move a motion. It is not correct. When there is aprovision to move a privilege motion against the Minister, you cannot move a motion, You cannot say the statement is wrong.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರೆಲ್ಲರೂ ಬಾವಿಯಲ್ಲಿ ಬಂದು ಧರಣಿ ಪ್ರಾರಂಭಿಸಿ, ಬಾವಿಯಲ್ಲಿ ನಿಂತುಕೊಂಡೇ ಮಾತನಾಡಲು ಪ್ರಾರಂಭಿಸಿದರು.)

ಶ್ರೀ ಕೆ. ಎನ್. ನಾಗೇಗೌಡ : 366 ತೆಗೆದುಕೊಳ್ಳಿ, ಇಲ್ಲ ಮಂತ್ರಿಗಳ ಸ್ಟೇಟ್‌ಮೆಂಟ್ ತೆಗೆದುಕೊಳ್ಳಿ, ನ್ಯಾಷನಲ್ ಪಾರ್ಟಿ ರೂಲ್ ಮಾಡತಕ್ಕಂತಹ ಪಾರ್ಟಿ ಲೀಡರ್, ಅವರ ಬಗ್ಗೆ ನಮಗೆ ಅವರು ಚರ್ಚೆ ಮಾಡಬಾರದು ಎಂದು ನಾವು ಹೇಳುವುದಿಲ್ಲ, ಸರ್ಕಾರದ ಹೇಳಿಕೆ ತಪ್ಪು ಮಾಹಿತಿಯಿಂದ ಕೂಡಿದೆ ಎಂದು ಯಾವ ಆಧಾರದ ಮೇಲೆ ಹೇಳುತ್ತಾರೆ? ಆಧಾರ ಇದ್ದರೆ let them ove a privilege motion. It is a very serious matter· ಎಲ್ಲಾ ರೂಲ್ಸ್ ಸಸ್ಪೆಂಡ್ ಮಾಡಿ ಮೆಂಬರ್ ಪ್ರಿವಿಲೇಜ್ ಪ್ರೈಯಾರಿಟಿ ಇದೆ. Let them give notice, tomorrow itself the House can take it up, ಪ್ರಿವಿಲೇಜ್ ಮೂವ್ ಮಾಡಲಿ, ನಾಳೆ ಪ್ರಿವಿಲೇಜ್ ತೆಗೆದುಕೊಳ್ಳಿ. Let the chair decides to suspend all the rules,

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರೆಲ್ಲರೂ ಬಾವಿಯಲ್ಲಿ ನಿಂತು ಮಾತನಾಡಲು ಪ್ರಾರಂಭಿಸಿದರು).

(ಗೊಂದಲ)

ಉಪಾಧ್ಯಕ್ಷರು : ನಾಗೇಗೌಡರು ತಂದ ಕ್ರಿಯಾಲೋಪವನ್ನು ಎತ್ತಿ ಹಿಡಿಯಲಾಗಿದೆ. ನಿಮಗೆ ನಾನು ವಿನಂತಿ ಮಾಡುವುದೇನೆಂದರೆ, 23ನೇ ತಾರೀಖಿನಂದು ನಿಯಮ 69ರ ಅಡಿಯಲ್ಲಿ ತಾವು ಒಂದು ವಿಷಯ ತಂದಿರಿ, ಒಂದು ಗಂಟೆ ಆರು ನಿಮಿಷ ಚರ್ಚೆಯಾಗಿದೆ, ಸ್ಟೇಟ್‌ಮೆಂಟ್ ಕೊಡಿ ಎಂದು ಹೇಳಿದರು, ನಾನೇ ಅಧ್ಯಕ್ಷ ಸ್ಥಾನದಲ್ಲಿದ್ದೆ, ಮಂತ್ರಿಗಳ ಕಡೆಯಿಂದ ಸ್ಟೇಟ್‌ಮೆಂಟ್ ಕೊಡಿಸಿದ್ದೇವೆ, ಕ್ಲಾರಿಫಿಕೇಷನ್ ಕೇಳುತ್ತಿದ್ದೀರಿ, ಏನು ಕ್ಲಾರಿಫಿಕೇಷನ್ ಕೇಳುವುದು ಎಷ್ಟು ಹೊತ್ತು, ಒಂದೆರಡು ಪ್ರಶ್ನೆ ಇದ್ದರೆ ಕೇಳಿ ಎಂದು ಹೇಳಿದೆ. ಅದು ಬಿಟ್ಟು ಗಂಟೆಯಾಯಿತು, ಕ್ಲಾರಿಫಿಕೇಷನ್ ಕೇಳುವುದು ಪ್ರಾರಂಭವಾಗಿ. ಯಾವ ರೀತಿ ಮುಂದಿನ ವಿಷಯಕ್ಕೆ ಹೋಗುವುದು, ಯಾವ ರೀತಿ ಸದನ ನಡೆಸುವುದು ಹೇಳಿ. ಅದಕ್ಕೆ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಒಂದು ಮೋಷನ್ ಮೂವ್ ಮಾಡುತ್ತೇನೆಂದು ಹೇಳಿದರು. ನೀವು ನೋಟೀಸ್ ಕಳುಹಿಸಿ ನಾನು ಮುಂದೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದೇನೆ. ದಯಮಾಡಿ ತಾವೆಲ್ಲರೂ ತಮ್ಮ ಸ್ಥಾನಕ್ಕೆ ಹೋಗಬೇಕು. ಚರ್ಚೆಬೇಡ ತಾವು ರೂಲ್ಸ್ ಪ್ರಕಾರ ಹೋಗಬೇಕು. ದಯಮಾಡಿ ನೋಟಿಸ್ ಕಳುಹಿಸಿ ಕೊಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಾವು ಈಗ ಕ್ಲಾರಿಫಿಕೇಷನ್ ಕೇಳಬಹುದು ಎಂದು ಹೇಳಿದಿರಿ. ತಾವೇ ಅಪ್ಪಣೆ ಕೊಡಿಸಿದಿರಿ. ಕ್ಲಾರಿಫಿಕೇಷನ್ ಕೇಳುವುದಕ್ಕೆ ಅಡ್ಡಿ ಇಲ್ಲ ಎಂದು ಹೇಳಿದಿರಿ....

ಉಪಾಧ್ಯಕ್ಷರು : ಕ್ಲಾರಿಫಿಕೇಷನ್ ಯಾರು ಕೇಳಬೇಕು; ರೂಲ್ 69ರಲ್ಲಿ ಯಾರು ಸೈನ್ ಮಾಡಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾವೂ ಸಹಿ ಮಾಡಿದ್ದೇವೆ.

ಡಾ|| ಎಂ. ಶಂಕರನಾಯಕ್ : ನಾನು ಜವಾಬ್ದಾರಿಯುತವಾಗಿ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಅದರಲ್ಲಿ ಸುಳ್ಳು ಮಾಹಿತಿ ಇಲ್ಲ. ಅವರು ಏನು ಹೇಳುತ್ತಾರೆಂದು ಪ್ರತಿಯೊಂದನ್ನೂ ಕ್ಲಿಯರ್ ಆಗಿ ಇಲ್ಲಿ ನರೇಟ್ ಮಾಡಿದ್ದೇನೆ. ಇದು 1993-94ನೇ ಇಸವಿಯಲ್ಲಿ ಆಗಿರತಕ್ಕಂಥದ್ದು. ಇವರಿಗೆ ಎಲ್ಲೋ

ಕಾಂತರವರ ಭೂತ ಕಾಡುತ್ತಿದೆ.. ಪ್ರತಿ ವರ್ಷ ಪೋರ್ಟ್‌ಮಾರ್ಟಂ ಆಗಿದೆ. ಇದರ ಬಗ್ಗೆ ಎಷ್ಟೋ ಸಾರಿ ಈ ಸದನದಲ್ಲಿ ಚರ್ಚೆಯಾಗಿದೆ. ಹಿಂದಿನ ಸರ್ಕಾರ ಇದ್ದಾಗ ಚರ್ಚೆಯಾಗಿದೆ, ಈಗಲೂ ಚರ್ಚೆಯಾಗುತ್ತಿದೆ, ಮುಂದೆಯೂ ಚರ್ಚೆಯಾಗುತ್ತಿದೆ. ನಾನು ಇದರಲ್ಲಿ ಏನಾದರೂ ತಪ್ಪು ಮಾಹಿತಿ ಕೊಟ್ಟಿದ್ದರೆ ಪ್ರಿವಿಲೇಜ್ ಕಮಿಟಿಗೆ ಹಾಕಿ. We are liable for their punishment. ಹೈಕೋರ್ಟ್ ಸುಪ್ರೀಂ ಕೋರ್ಟ್ ಸ್ಟೇಟ್‌ಮೆಂಟ್ ಹೇಳಿದ್ದಾರೆ, ಅವೆಲ್ಲಾ ನಾನು ವಿಚಾರಣೆ ಆದ ನಂತರ ಲೋಕಾಯುಕ್ತದವರು ಹೇಳಿದ್ದಾರೆ. She has been exonerated because she is not involved. ಹಿಂದೆ ಅದರಲ್ಲಿ ಹೇಳಿದ್ದೇನೆ, ಸೆಲೆಕ್ಷನ್ ಕಮಿಟಿ ಮುಂದೆ 26 ಹುಡುಗರಿಗೆ ಏನು ಸೀಟ್ ಕೊಟ್ಟಿದ್ದಾರೆ, ಅದು ಸೆಲೆಕ್ಷನ್ ಕಮಿಟಿ ಮುಂದೆ ಬಂದಿಲ್ಲ. ಆ ಮೇಲೆ ಸೆಲೆಕ್ಷನ್ ಕಮಿಟಿ ಸೆಲೆಕ್ಟ್ ಮಾಡಿರುವವರು ಆಗಿನ ನಿರ್ದೇಶಕರು ಮತ್ತು ಉಪ ನಿರ್ದೇಶಕರು. ಆ ಕಮಿಟಿಯಲ್ಲಿ ಡೆಂಟಲ್ ಕಾಲೇಜ್ ಪ್ರಿನ್ಸಿಪಾಲ್, ಫಾರ್ಮಸಿ ಕಾಲೇಜ್ ಪ್ರಿನ್ಸಿಪಾಲ್ ಇದ್ದಾರೆ. ಅವರನ್ನು ಡೈರೆಕ್ಟರ್ ಮಾಡಿದ್ದು ಹಿಂದಿನ ಸರ್ಕಾರ 1993ನೇ ಇಸವಿಯಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೇ, ನಾನು ಮಂತ್ರಿಗಳನ್ನು ನೇರವಾಗಿ ಕೇಳುತ್ತಿದ್ದೇನೆ, ಅದಕ್ಕೆ ಉತ್ತರ ಕೊಡಲಿ. ದಿನಾಂಕ24-10-1997ರಂದು ಲೋಕಾಯುಕ್ತ ನನ್ನ ಅಂತಿಮ ವರದಿಯನ್ನು ಕೊಟ್ಟಿದೆ, ಅದರಲ್ಲಿ ಪ್ಯಾರಾ ನಂಬರ್ 22ರಲ್ಲಿ ಏನು ಹೇಳುತ್ತಾರೆಂದರೆ order disciplinary action on respondents 2, 3 and 4, vis Renukarya, kanta and prakash for act of mal-administration,failure of scrutinishing, verifying letters from admission register, marks card and admission ticket, ಎಂದು ಲೋಕಾಯುಕ್ತದವರು ಕೊಟ್ಟಿರುವ ಫೈನಲ್ ರಿಪೋರ್ಟ್‌ನಲ್ಲಿದೆ. ಇದು ಹೌದೋ ಅಥವಾ ಅಲ್ಲವೋ ಎಂಬುದನ್ನು ಮಂತ್ರಿಗಳು ಹೇಳಲಿ. ನೀವು ಇದರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರೀ ಎಂ. ಶಂಕರನಾಯಕ್ : ಮಾನ್ಯ ಉಪಾಧ್ಯಕ್ಷರೇ, ಲೋಕಾಯುಕ್ತದವರು ಕೊಟ್ಟಿರುವ ಆ ಫೈನಲ್ ರಿಪೋರ್ಟ್‌ನಲ್ಲಿ ಆಗಿನ ಪ್ರಾಂಶುಪಾಲರ ಸಂಬಂಧವಿರುವುದಿಲ್ಲ. ಈ ರಿಪೋರ್ಟ್‌ಗೆ ಸಂಬಂಧಪಟ್ಟಂತೆ ಸಂಬಂಧವಿರುವವರು ಯಾರೆಂದರೆ ಒಬ್ಬ ಗುಮಾಸ್ತ, ಡೆಪ್ಯುಟಿ ಡೈರಕ್ಟರ್ ಹಾಗೂ ಡೈರಕ್ಟರ್, ಈ ಮೂವರು ಸೇರಿ ಅದನ್ನು ಮಾಡಿರತಕ್ಕಂಥದ್ದು.

SRI KAGODU THIMAPPA : Is it not a fact that such a report given by the loka Ayuktha

ಶ್ರೀ ಪ್ರಮೀಳಾನೇಸರ್ಗಿ : ಮಂತ್ರಿಗಳು ತಪ್ಪು ಉತ್ತರ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ಸರ್ಕಾರ ತಪ್ಪು ಉತ್ತರ ಕೊಟ್ಟಿದ್ದರೆ ಪ್ರಿವಿಲೇಜ್ ಮೂವ್ ಮಾಡುವಿರಂತೆ.

ಡಾ|| ಎಂ. ಶಂಕರನಾಯಕ್ : ಮಾನ್ಯ ಉಪಾಧ್ಯಕ್ಷರೇ, ಅಂದೇನಾಗಿದೆಯೆಂದರೆ ಸೆಲೆಕ್ಷನ್ ಕಮಿಟಿ ಮುಂದೆ ಅಭ್ಯರ್ಥಿಗಳು ಯಾರೂ ಬರಲಿಲ್ಲ. ಕೇವಲ ಡೈರಕ್ಟರ್ ಮತ್ತು ಡೆಪ್ಯುಟಿ ಡೈರಕ್ಟರ್

ಸೇರಿಕೊಂಡು ಈ ಕೆಲಸವನ್ನು ಮಾಡಿದ್ದಾರೆ. ಡಾ॥ ಕಾಂತಾರವರು ಡೈರಕ್ಟರ್ ಆಗಿ ಛಾರ್ಜ್ ತೆಗೆದು ಕೊಂಡಮೇಲೆ ಈ ರೀತಿಯ ಅವ್ಯವಹಾರ ನಡೆದಿದೆಯೆಂದು ಸರ್ಕಾರದ ಗಮನಕ್ಕೆ ತಂದರು. ಆಗ ಸರ್ಕಾರ ಹೈಕೋರ್ಟ್‌ಗೆ ಮನವಿ ಸಲ್ಲಿಸಿ 21 ವಿದ್ಯಾರ್ಥಿಗಳಿಗೆ ಕೊಟ್ಟಿರುವ ಆಡ್ಮಿಷನ್ ತಪ್ಪಾಗಿದೆ ಎಂದು ಹೇಳಿತು.. ಇದಾದ ನಂತರ ಆವಿದ್ಯಾರ್ಥಿಗಳು ಸುಪ್ರೀಂಕೋರ್ಟ್‌ಗೆ ಹೋದಾಗ ಸುಪ್ರೀಂ ಕೋರ್ಟ್ ಒಬ್ಬ ನ್ಯಾಯಾಧೀಶನನ್ನು ಅಪಾಯಿಂಟ್ ಮಾಡಿತು, ಆ ನ್ಯಾಯಾಧೀಶರು ಸುಪ್ರೀಂ ಕೋರ್ಟ್‌ನಲ್ಲಿ ವರದಿ ಮಾಡಿರುವಂತೆ ಅವರು ಏನು ಹೇಳಿದ್ದಾರೆಂದರೆ.

``Member of SSE including the Chairman who are equally guilty, if not more have been promoted (lokayutha investigation is still pending)

ಶ್ರೀಮತಿ ಪ್ರಮೀಳಾ ನೇಸರ್ಗಿ : ಕೋರ್ಟ್‌ನಲ್ಲಿ ಕೇಸ್ ಪೆಂಡಿಂಗ್‌ನಲ್ಲಿದೆ ಎಂದು ತಾವು ಹೇಳಿದ್ದೀರಿ. ಆದರೆ ಅದಾದನಂತರ ಲೋಕಾಯುಕ್ತದಿಂದ ಫೈನಲ್ ರಿಪೋರ್ಟ್ ಬಂದಿದೆ. ದಿನಾಂಕ 24-11-1997 ರಂದು ಲೋಕಾಯುಕ್ತದಿಂದ ಬಂದ ಫೈನಲ್ ರಿಪೋರ್ಟ್‌ನ ಪ್ಯಾರಾ ನಂಬರ್ 22ರಲ್ಲಿ ಏನು ಹೇಳಿದ್ದಾರೆಂದರೆ order disciplinary action on respondents 2,3 and 4, ie., Renukaraya, Smt. Kanta and Prakash for act of mal-administration, failure to scrutinishing, verifying letters from admission register, marks card, admission ticket before intake,. This is the finding of the Lokayutha, ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ.

ಡಾ॥ ಎಂ. ಶಂಕರನಾಯಕ್ : ಹಿಂದೆ ಏನು ಎಫ್.ಐ. ಆರ್. ಹಾಕಿದ್ದರೋ ಅದಾದ ಮೇಲೆ ಲೋಕಾಯುಕ್ತದಿಂದ ಒಂದು ಪತ್ರ ಬಂದಿದೆ, ಅದರಲ್ಲಿ ಏನಿದೆಯೆಂದರೆ the present Director is exonerated from that She is not involved. ಎಂದು ಇದೆ. ಲೋಕಾಯುಕ್ತದ ಫೈನಲ್ ರಿಪೋರ್ಟ್ 1997ರಲ್ಲಿ ಬಂದಿರುವುದು. ಆಗ ಆಕೆ ಸರ್ಕಾರಿ ಸೇವೆಯಲ್ಲಿರಲಿಲ್ಲ, ನಾನು ಈಗಾಗಲೇ ಇದನ್ನು ನನ್ನ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. She was retired from the service; She had become the Vice-Chancellor. ವೈಸ್ ಚಾನ್ಸಲರ್‌ನ್ನಾಗಿ ಮಾಡುವ ಅಧಿಕಾರ ರಾಜ್ಯಪಾಲರಿಗೆ ಇರುತ್ತದೆ. She is no more a Government servant now, ಲೋಕಾಯುಕ್ತದಿಂದ ಫೈನಲ್ ರಿಪೋರ್ಟ್ ಬಂದಾಗ ಡಾಧಾ ಕಾಂತಾರವರು ಸೇವೆಯಲ್ಲಿ ಇದ್ದಿದ್ದರೆ we would have definitely taken action. Earlier report of Lokayutha says she has been exonerated. ಇನ್ನು ಮಹೇಶ್ ಹೆಗಡೆಯವರು ವರದಿಯಲ್ಲಿ ಲೋಕಾಯುಕ್ತ ರಿಪೋರ್ಟ್ ಸ್ಟಿಲ್ ಪೆಂಡಿಂಗ್ ಎಂದು ಹೇಳುತ್ತಾರೆ. ನಾನು ಆಗಲೇ ಹೇಳಿದ ಹಾಗೆ ಸೆಲೆಕ್ಷನ್ ಕಮಿಟಿಯಲ್ಲಿ ಮೂವರು ಪ್ರಾಂಶುಪಾಲರು ಡೈರಕ್ಟರ್‌ಗಳಾಗಿದ್ದಾರೆ, ಒಬ್ಬರನ್ನು ಇನ್‌ವಾಲ್ವ್ ಮಾಡುತ್ತಾರೆ, ಇನ್ನಿಬ್ಬರನ್ನು ಹಾಗೆಯೇ ಬಿಡುತ್ತಾರೆ, ಇದಲ್ಲದೆ ಸುಪ್ರೀಂಕೋರ್ಟ್‌ಗೆ ಹೋದಂಥ ವಿದ್ಯಾರ್ಥಿಗಳು ಏನು ಮಾಡಿದ್ದಾರೆಂದರೆ ತಮ್ಮ ರ್‍ಯಾಂಕ್ 24450 ಎಂದು ಇದ್ದರೆ ಅದನ್ನು1900 ನೇ ರ್‍ಯಾಂಕ್ ಎಂದು ತಿದ್ದಿಕೊಂಡಿದ್ದಾರೆ. ಇದು ಸೆಲೆಕ್ಷನ್ ಕಮಿಟಿ

ಮುಂದೆ ಹೋಗಿಲ್ಲ. ವಿದ್ಯಾರ್ಥಿಗಳು ತಮ್ಮ ರ್ಯಾಂಕನ್ನು ತಪ್ಪಾಗಿ ಕೊಟ್ಟು ಬೇರೆಯವರ ರ್ಯಾಂಕ್‌ನಲ್ಲಿ ಅಡ್ಮಿಷನ್‌ನ್ನು ಪಡೆದಿದ್ದಾರೆ. ಇವರು ಸುಪ್ರೀಂಕೋರ್ಟ್‌ಗೆ ಹೋದಾಗ ಈಗಾಗಲೇ ಎರಡು ಸೆಮಿಸ್ಟರ್ ಮುಗಿದುಹೋಗಿರುವುದರಿಂದ ಮಾನವೀಯತೆಯ ದೃಷ್ಟಿಯಿಂದ ವಿದ್ಯಾರ್ಥಿಗಳನ್ನು ಮತ್ತೆ ಅಬ್ಸರ್ವ್ ಮಾಡಿ ಎಂದು ಸುಪ್ರೀಂಕೋರ್ಟ್ ಹೇಳಿದೆ. ನನಗೇನೋ ಇದರ ಬಗ್ಗೆ ಅರ್ಥವೇ ಆಗಲಿಲ್ಲ. ನಿಜವಾಗಿಯೂ ಆ ವಿದ್ಯಾರ್ಥಿಗಳ ಮೇಲೆಯೇ ಕ್ರಿಮಿನಲ್ ಕೇಸ್ ಆಗಬೇಕಾಗಿತ್ತು. ಅಂಥ ವಿದ್ಯಾರ್ಥಿಗಳು ತಮ್ಮ ರ್ಯಾಂಕ್‌ನ್ನು ತಿದ್ದಿಕೊಂಡು ಬಂದು ಪಾಸ್ ಆಗಿ ಮುಂದೆ ವೈದ್ಯರಾಗಿ ಮಾಡತಕ್ಕಂಥ ಕೆಲಸವಾದರೂ ಏನಿದೆ? ಆದರೆ ಸುಪ್ರೀಂಕೋರ್ಟ್ ಆದೇಶವಿರುವುದರಿಂದ ನಾವು ಅದರ ಬಗ್ಗೆ ಮುಂದೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ನಾನು ಕೊಟ್ಟಿರುವುದರಲ್ಲಿ ಯಾವ ಮಾಹಿತಿ ತಪ್ಪು ಎಂದು ಅವರು ಹೇಳುತ್ತಾರೆ, I am liable for anything. I have given correct answer as far as I am comcermed. ಇನ್ನು ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ ಸೀಟ್ ಅಲಾಟ್ ಮಾಡಿರುವ ಬಗ್ಗೆ ಅವರು ಕ್ಲಾರಿಫಿಕೇಷನ್ ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಮತ್ತು ಯಾವುದೋ ಕಾಲೇಜಿನ ಸೀಟ್ ಬಗ್ಗೆಯೂ ಕೇಳಿದರು.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಯಾವ ಕಾಲೇಜ್ ಸೀಟ್ ಬಗ್ಗೆಯೂ ಕೇಳುತ್ತಿಲ್ಲ. ಲೋಕಾಯುಕ್ತದ ಫೈಂಡಿಂಗ್ಸ್ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ನೀವು ಏನು ಹೇಳಿದಿರೆಂದರೆ ಅಪರ್‌ಚ್ಯುನಿಟಿ ಕೊಟ್ಟು ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ. ಯಾರಿಗೆ ಪ್ರಮೋಟ್ ಮಾಡಬಾರದಾಗಿತ್ತೋ ಅಂಥವರಿಗೆ ಏಕೆ ಪ್ರಮೋಟ್ ಮಾಡಿದಿರಿ ಎಂದಾಗ ನಿಮ್ಮ ವಕೀಲರು ಏನು ಉತ್ತರ ಕೊಟ್ಟರೆಂದರೆ ಅಪರ್‌ಚ್ಯುನಿಟಿ ಕೊಟ್ಟು ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ ಎಂದರು. ಈಗ ರಿಪೋರ್ಟ್ ಬಂದು ಅದರಲ್ಲಿ ಇಂಡಿಕ್ಟ್ ಮಾಡಿದ್ದಾರೆ, ನೀವು ನೋಟೀಸ್ ಕೊಟ್ಟಾಗಿದೆ, ಅವರ ಮೇಲೆ ಎನ್‌ಕ್ವೈರಿ ಕೂಡ ಆಗಿದೆ, ಈಗ ನೀವು ಏನು ಆಕ್ಷನ್‌ನ್ನು ಅವರಮೇಲೆ ತೆಗೆದುಕೊಂಡಿದ್ದೀರಿ ಎಂಬುದನ್ನು ನಾನು ಕೇಳುತ್ತಿದ್ದೇನೆ. Are you going to demote the Vice-Chancellor or not? Please were this question.

ಡಾ|| ಎಂ. ಶಂಕರನಾಯಕ್ : ಮಾನ್ಯ ಉಪಾಧ್ಯಕ್ಷರೇ, ಡಾ|| ಕಾಂತಾರವರು ವೈಸ್ ಚಾನ್ಸ್‌ಲರ್ ಆದಮೇಲೆ ರಿಪೋರ್ಟ್ ಬಂದಿದೆ. ಅವರ ಮೇಲೆ ಕ್ರಮ ಜರುಗಿಸಲು ಡಿ.ಪಿ.ಎ.ಆರ್. ನವರು ರಾಜ್ಯಪಾಲರಿಗೆ ರೆಫರ್ ಮಾಡಿದ್ದಾರೆ. ಇದು ಅವರು ವೈಸ್ ಚಾನ್ಸಲರ್ ಆದಮೇಲೆ 1997ರಲ್ಲಿ ಬಂದಿರತಕ್ಕಂಥದ್ದು. ಇನ್ನು ಮಾನ್ಯ ಸದಸ್ಯರು ಮಾತನಾಡುತ್ತಾ ಯಾವುದೋ ಕಾಲೇಜಿನಲ್ಲಿ ಅಡಿಶನಲ್ ಸೀಟನ್ನು ಹೆಚ್ಚಾಗಿ ಕೊಟ್ಟಿದ್ದೀರಿ ಎಂದಿದ್ದಾರೆ. ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ಈ ವಿಷಯವಾಗಿ ಹೇಳುವುದೇನೆಂದರೆ ದಿನಾಂಕ 1-6-92ರ ನಂತರ ಪಾರ್ಲಿಮೆಂಟಿನಲ್ಲಿ ಸೀಟ್ ಅಲಾಟ್‌ಮೆಂಟ್‌ಗೆ ಸಂಬಂಧಪಟ್ಟಂತೆ ಆಕ್ಟ್ ಆಗಿದ್ದು ಅದರ ಪ್ರಕಾರ ಒಂದು ಸೀಟನ್ನು ಕಡಿಮೆ ಮಾಡುವುದಾಗಲಿ ಅಥವಾ ಒಂದು ಸೀಟನ್ನು ಹೆಚ್ಚಿಗೆ ಮಾಡುವ ಅಧಿಕಾರವಾಗಲಿ ರಾಜ್ಯ ಸರ್ಕಾರಕ್ಕೆ ಇರುವುದಿಲ್ಲ. ನಾವೇನು ಕೊಡಬಹುದೆಂದರೆ ಅವರ ಇನ್‌ಫ್ರಾಸ್ಟ್ರಕ್ಚರ್ಸ್ ನೋಡಿಕೊಂಡು ಅದರ ವರದಿಯನ್ನು ತರಿಸಿಕೊಂಡು ಪರಿಶೀಲಿಸಿ ಎನ್‌ಎನ್‌ಷಿಯಾಲಿಟಿ ಸರ್ಟಿಫಿಕೇಟನ್ನು ಮಾತ್ರ ನಾವು

ಕೊಡಬಹುದಷ್ಟೆ. ಅದೂ ಕೂಡ ಎಂ.ಸಿ.ಐ.ಗೆ ಹೋಗಿ ಅಲ್ಲಿಂದ ಕೇಂದ್ರ ಸರ್ಕಾರಕ್ಕೆ ಹೋದ ಬಳಿಕ ಅದನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಆದರೆ ಯಾವುದೇ ಕಾಲೇಜಿಗೂ ಸೀಟನ್ನು ಅಲಾಟ್ ಮಾಡುವ ಅಧಿಕಾರ ನಮಗೆ ಇಲ್ಲ. ನಾವು ಕೊಡಲಿಕ್ಕೂ ಬರುವುದಿಲ್ಲ. ನಾವು ಕೊಟ್ಟು ಇಲ್ಲ. ಒಂದು ವೇಳೆ ಕೊಟ್ಟಿದ್ದರೆ ಅದು ಕೇವಲ ಎಸ್‌ಎನ್‌ಷಿಯಾಲಿಟಿ ಸರ್ಟಿಫಿಕೇಟ್ ಮಾತ್ರ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ಅವರು ಉತ್ತರವನ್ನು ಸರಿಯಾಗಿ ಕೊಟ್ಟಿಲ್ಲ. ಏಕೆಂದರೆ ವೈಸ್ ಚಾನ್ಸಲರ್ ಗೌವರ್ನಮೆಂಟ್ ನಾಮಿನಿಯಾಗುತ್ತಾರೆ. Minister on this account for not taking action after giving an undertaking before the supreme Court he is liable to resign from the post forthwith.

ಡಾ॥ ಎಂ. ಶಂಕರನಾಯಕ್ : ನಾನು ಕೊಟ್ಟಿರುವ ವರದಿ ತಪ್ಪೇ? ಲೋಕಾಯುಕ್ತ ಕೊಟ್ಟಿರುವ ವರದಿ ತಪ್ಪೇ ಎಂಬ ಬಗ್ಗೆ ಇವರು ಬೇಕಾದರೆ ಹೈಕೋರ್ಟ್‌ಗೆ ಹೋಗಿದ್ದಾರಲ್ಲಾ, ಅದೇ ರೀತಿ ಈಗಲೂ ಹೈಕೋರ್ಟ್‌ಗೆ ಹೋಗಲಿ. ನಮ್ಮ ಸರ್ಕಾರವಿರುವಾಗ ಅದಕ್ಕೆ ಸಂಬಂಧಪಟ್ಟಂತೆ ಏನು ಮಾಹಿತಿಗಳು ಲಭ್ಯವಿದೆಯೋ ಅದರ ಪ್ರಕಾರ ವರದಿಯನ್ನು ಕೊಟ್ಟಿದ್ದೇವೆ. ಅದು ತಪ್ಪಿದ್ದರೆ ಹೈಕೋರ್ಟ್‌ಗೆ ಇವರು ಹೋಗಲಿ.

ಶ್ರೀ ಎ. ರಾಮದಾಸ್ : ಅಂದು ಎಕ್ಸಸ್ ಸೀಟ್ ಬಗ್ಗೆ ಚರ್ಚೆಯಾಗತಕ್ಕಂಥ ಸಮಯದಲ್ಲಿ ಮಾನ್ಯ ಮಂತ್ರಿಯವರು ಮಾತನಾಡಿ ನನ್ನ ಕಾಲದಲ್ಲಿ ಒಂದು ಸೀಟ್ ಕೂಡ ಎಕ್ಸಸ್ ಕೊಟ್ಟಿಲ್ಲವೆಂದು ಹೇಳಿ ಒಂದು ವೇಳೆ ಆ ರೀತಿಯಲ್ಲಿ ಒಂದು ಸೀಟನ್ನಾದರೂ ಎಕ್ಸಸ್ ಕೊಟ್ಟಿದ್ದರೆ ನಾನು ಈ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟುಹೋಗುತ್ತೇನೆ ಎಂದು ಹೇಳಿದ್ದರು. ನಾನು ಇಂದು ಹೇಳುತ್ತಿರುವುದು ಇವರು ಮಂತ್ರಿಯಾಗಿ ಬಂದ ನಂತರವೇ ಎಕ್ಸಸ್ ಸೀಟ್ ಅಲಾಟ್ ಆಗಿರುವ ವಿಷಯದ ಬಗ್ಗೆಯೇ ಹೇಳುತ್ತಿರುವುದು. ಎಂ.ಎಸ್ ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ 150 ಸೀಟ್‌ಗಳಿಗೆ ಬದಲಾಗಿ 171 ಸೀಟಗಳನ್ನು ಇವರ ಅಧಿಕಾರಾವಧಿಯಲ್ಲಿಯೇ ಕೊಡಲಾಗಿದೆ. ಆದರೆ ಬೆಂಗಳೂರು ಯೂನಿವರ್ಸಿಟಿಯವರು ಆ 21 ಜನರಿಗೆ ಅಡ್ಮಿಷನ್‌ನ್ನು ಕೊಟ್ಟಿಲ್ಲ. ಅಡ್ಮಿಷನ್ ಟಿಕೆಟ್ ಕೊಡದೇ ಪರೀಕ್ಷೆಗೆ ಕೂರಿಸುವುದಿಲ್ಲವೆಂದು ಹೇಳಿದರು. ಆ ನಂತರದಲ್ಲಿ ಸರ್ಕಾರದವರು ಪತ್ರವನ್ನು ಬರೆದು ಆ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಪ್ರಾವಿಷನ್ ಮಾಡಿಕೊಟ್ಟಿದ್ದಾರೆ. ಇದರ ಜೊತೆಗೆ ಆ ಕಾಲೇಜಿನ ಪ್ರಾಂಶುಪಾಲರು ಫೇಕ್ ಅಡ್ಮಿಷನ್ ಟಿಕೆಟ್ ಕೊಟ್ಟಿರುವುದಕ್ಕೆ ನಮ್ಮ ಬಳಿ ದಾಖಲಾತಿ ಇದೆ. ಇದೆಲ್ಲಾ ಇವರ ಪಿರಿಯಡ್‌ನಲ್ಲಿಯೇ ಆಗಿರುವಂಥದ್ದು. ಫೇಕ್ ಅಡ್ಮಿಷನ್ ಟಿಕೆಟ್ ಕೊಟ್ಟ ಕಾರಣದಿಂದ 150ರ ಬದಲು 171 ಪೇಪರ್ಸ್ ಇವ್ಯಾಲ್ಯುಯೇಟರ್‌ಗೆ ಬಂದಾಗ ಇದರ ಬಗ್ಗೆ ಬೆಂಗಳೂರು ಸಿಂಡಿಕೇಟ್‌ನಲ್ಲಿ ಚರ್ಚೆಯಾಗಿದೆ. ಈ ಫೇಕ್ ಅಡ್ಮಿಷನ್ ಟಿಕೆಟ್ ವ್ಯಾಪ್ತಿಯಲ್ಲಿ ಈ ಸದನದ ಒಳಗಡೆ ಇರುವಂಥ ಮಂತ್ರಿಗಳ ಮಕ್ಕಳೂ ಇದ್ದಾರೆ. ಆ ದೃಷ್ಟಿಯಿಂದ ಇದನ್ನು ಮುಚ್ಚಿ ಹಾಕಲು ಎಲ್ಲಾ ಪ್ರಯತ್ನವನ್ನೂ ಮಾಡಿ ರಾಜ್ಯ ಸರ್ಕಾರದಿಂದ ಕ್ಲಾರಿಫಿಕೇಷನ್‌ನ್ನು ಕಾಲೇಜಿಗೆ ಕೊಡಲಾಗಿದೆ. ಇವೆಲ್ಲವೂ ಇವರ ಪಿರಿಯಡ್‌ನಲ್ಲಿಯೇ ಆಗಿರುವಂಥದ್ದು. ನಿಮ್ಮ ಅವಗಾಹನೆಗೆ ಅವೆಲ್ಲದರ ಬಗ್ಗೆ ಮಾಹಿತಿ ಬೇಕೆಂದರೆ ಆ ವಿದ್ಯಾರ್ಥಿಗಳ ಅಡ್ಮಿಷನ್ ಟಿಕೆಟ್ ನಂಬರ್‌ಗಳನ್ನು ಮತ್ತು ಬೆಂಗಳೂರು

ಯೂನಿವರ್ಸಿಟಿಯವರು ಕೊಟ್ಟಿರುವಂಥ ದಾಖಲಾತಿಗಳ ಸಮೇತವಾಗಿ ಕೊಟ್ಟಿರುವಂಥ ಪತ್ರದೊಂದಿಗೆ ತಮ್ಮ ಮುಂದೆ ಇಡುತ್ತೇನೆ. ಬೆಂಗಳೂರು ಯೂನಿವರ್ಸಿಟಿಯವರ ಪತ್ರವನ್ನು ಓದಲಿಕ್ಕೆ ನನಗೆ ಅವಕಾಶ ಕೊಟ್ಟರೆ ಎಲ್ಲವನ್ನೂ ಓದಿಬಿಡುತ್ತೇನೆ.

ಡಾ॥ ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ನಾನು ಆಗಲೇ ಇದರ ಬಗ್ಗೆ ಹೇಳಿದ್ದೇನೆ, ಯಾವುದೇ ಕಾಲೇಜಿಗೆ ಒಂದು ಸೀಟನ್ನೂ ಅಲಾಟ್ ಮಾಡತಕ್ಕಂಥ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಒಂದು ವೇಳೆ ಆ ಕಾಲೇಜಿನವರು ಹೆಚ್ಚಿಗೆ ಸೀಟ್ ಅಡ್ಮಿಷನ್ ಮಾಡಿಕೊಂಡಿದ್ದರೆ ಪರೀಕ್ಷೆಗೆ ಕುಳಿತುಕೊಳ್ಳಲು ಯುನಿವರ್ಸಿಟಿಯವರು ಒಪ್ಪಿಗೆ ಕೊಡುವುದಿಲ್ಲ. ಕಳೆದ ಬಾರಿ ಕೆಲವು ಕಾಲೇಜ್‌ಗಳಲ್ಲಿ ಎಕ್ಸಸ್ ಅಡ್ಮಿಷನ್ ಆಗಿದೆಯೆಂದು ಹೇಳಿದಾಗ ಅದಕ್ಕೆ ನಾವು ಜವಾಬ್ದಾರರಲ್ಲವೆಂದು ಹೇಳಿದ್ದೇವೆ. ಆಗ ಆ ವಿದ್ಯಾರ್ಥಿಗಳು ಕೋರ್ಟ್‌ಗೆ ಹೋದರು. ಆಗ ಹೈಕೋರ್ಟ್ ತೀರ್ಪನ್ನು ಕೊಟ್ಟು ಪರೀಕ್ಷೆಗೆ ಇವರನ್ನು ಕೂಡಿಸಿ, ಆದರೆ ಫಲಿತಾಂಶವನ್ನು ಪೆಂಡಿಂಗ್‌ನಲ್ಲಿಡಿ ಎಂದು ಹೇಳಿತು. ಆದುದರಿಂದ ನಾನು ಸ್ಪಷ್ಟವಾಗಿ ಈಗಾಗಲೇ ಹೇಳಿದ ಪ್ರಕಾರ ಯಾವುದೇ ಕಾಲೇಜಿಗೂ ಒಂದು ಸೀಟನ್ನೂ ಕೂಡ ಅಲಾಟ್ ಮಾಡುವ ಅಧಿಕಾರ ರಾಜ್ಯಸರ್ಕಾರಕ್ಕೆ ಇಲ್ಲ. ಒಂದು ವೇಳೆ ಕೊಟ್ಟಿದ್ದರೆ ಅದು ಎಸೆನ್ಷಿಯಾಲಿಟಿ ಸರ್ಟಿಫಿಕೇಟನ್ನು ಆ ಕಾಲೇಜಿನಲ್ಲಿರತಕ್ಕಂಥ ಸಿಬ್ಬಂದಿ ಬಗ್ಗೆ ವರದಿಯನ್ನು ತರಿಸಿ ಪರಿಶೀಲಿಸಿ ಕೊಟ್ಟಿರುತ್ತೇವಷ್ಟೆ. ಆದರೆ ಸೀಟನ್ನು ನಿಗದಿ ಮಾಡುವುದು ಕೇಂದ್ರಸರ್ಕಾರವೇ ಹೊರತು ರಾಜ್ಯ ಸರ್ಕಾರವಲ್ಲ.

5.00 ಪಿ.ಎಂ

ಒಂದು ವೇಳೆ ನಮ್ಮ ಗಮನಕ್ಕೆ ಬಾರದೆ ಯಾವುದೇ ಕಾಲೇಜು ಎಕ್ಸಸ್ ಅಡ್ಮಿಷನ್ ಮಾಡಿದ್ದರೆ, ಅದಕ್ಕೆ ಸರ್ಕಾರ ಹೊಣೆಯಲ್ಲ. ಅದಕ್ಕೆ ಯೂನಿವರ್ಸಿಟಿ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ ಅವರನ್ನು ಪರೀಕ್ಷೆಗೆ ಕೂರಿಸುವುದಿಲ್ಲ. ಆ ರೀತಿ ನಿದರ್ಶನಗಳು ಯಾವುದಾದರೂ ಇದ್ದರೆ ಕೊಡಲಿ, ನಾವು ಪರಿಶೀಲನೆ ಮಾಡುತ್ತೇವೆ. ನಾನು ಜವಾಬ್ದಾರಿ ಸ್ಥಾನದಲ್ಲಿ ನಿಂತು ಹೇಳುತ್ತಿದ್ದೇನೆ. ನಾವು ಹೇಳುವುದರಲ್ಲಿ ಏನಾದರೂ ತಪ್ಪಿದ್ದರೆ ಅವರು ಹೇಳಲಿ.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೇ, ತಪ್ಪು ಎಂದು ಹೇಳುತ್ತಿದ್ದೇನೆ. ನ್ಯಾಯಾಲಯದಲ್ಲಿ ಅವರು ಹೇಳಿದ ರೀತಿಯಲ್ಲಿ ಎಕ್ಸಾಮಿನೇಷನ್ ತೆಗೆದುಕೊಳ್ಳುವುದಕ್ಕೆ ಪರ್ಮಿಷನ್ ಕೊಟ್ಟಿಲ್ಲ. ಹೈಕೋರ್ಟ್ ಜಡ್ಜ್‌ಮೆಂಟ್ ಕಾಪಿ ನನ್ನ ಹತ್ತಿರ ಇದೆ. ಯಾರಿಗೆ ಎಕ್ಸಸ್ ಸೀಟು ಕೊಟ್ಟಿದ್ದರು, ಹೈಕೋರ್ಟ್‌ನಲ್ಲಿ ಅದನ್ನು ರಿಜೆಕ್ಟ್ ಮಾಡಲಾಯಿತು. ಅನಂತರದಲ್ಲಿ ಇವರು ಮಂತ್ರಿಯಾಗಿದ್ದಾಗ ಇವರೇ ರಿಪೋರ್ಟನ್ನು ಸರ್ಕಾರದ ವತಿಯಿಂದ ಇವರೇ ಯೂನಿವರ್ಸಿಟಿಗೆ ಕೊಟ್ಟು ಮತ್ತೆ ಅವರ ಪತ್ರಿಕೆಗಳನ್ನು ವ್ಯಾಲ್ಯೂಯೇಷನ್ ಮಾಡುವ ಹಾಗೆ ಮಾಡಿರುವುದು ಇವರೇ. ಯೂನಿವರ್ಸಿಟಿಯವರ ನಾಲೆಡ್ಜ್‌ಗೆ ಬಾರದೇ ರಿಸಲ್ಟ್ ಅನೌನ್ಸ್ ಮಾಡಿಸಿದ್ದಾರೆ. 21 ಜನರನ್ನು ಪಾಸ್ ಮಾಡಿಸಿದ್ದಾರೆ. ಆ 21 ಜನರು ಮತ್ತೆ ಸೆಕೆಂಡ್ ಇಯರ್ ಪರೀಕ್ಷೆಗೆ ಹೋಗುವ ಹಾಗೆ ವ್ಯವಸ್ಥೆ ಅಡ್ಮಿಷನ್ ಟಿಕೇಟ್ ಕೂಡ ಕೊಡುತ್ತಿದ್ದೇನೆ.

ಡಾ|| ಎಂ. ಶಂಕರನಾಯಕ್ : ಮಾನ್ಯ ಉಪಾಧ್ಯಕ್ಷರೇ, ಎಕ್ಸಸ್ ಅಡ್ಮಿಷನ್ ಮಾಡಿದ್ದರೆ, ಅದು ಕೋರ್ಟ್ ನಿರ್ದೇಶನದ ಮೇಲೆ ಮಾಡಿರುತ್ತದೆಯೇ ಹೊರತು ಸರ್ಕಾರಕ್ಕೂ ಅದಕ್ಕೂ ಯಾವುದೇ ಸಂಬಂಧ ಇಲ್ಲ. ಸರ್ಕಾರಕ್ಕೆ ಯಾವುದೇ ಎಕ್ಸಸ್ ಅಭ್ಯರ್ಥಿಗಳನ್ನು ಪರೀಕ್ಷೆ ಮಾಡಿ ಎಂದು ಹೇಳುವುದಕ್ಕೆ ಅಧಿಕಾರ ಇಲ್ಲ.

ಉಪಾಧ್ಯಕ್ಷರು : ಸರ್ಕಾರದ ಪರವಾಗಿ ಏನು ಹೇಳುತ್ತಾರೆಂದರೆ ನಾವೇನಾದರೂ ತಪ್ಪು ಮಾಡಿದರೆ ನೀವು ಅದನ್ನು ನೋಟೀಸ್ ಕೊಡಿ. ಈಗ ಆ ವಿಚಾರವನ್ನು ಬಿಟ್ಟು ಬಿಡಿ. ಈ ರೀತಿ ಮಾಡಿದರೆ ಹೇಗೆ? ತಾವುಗಳು ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

ಡಾ|| ಶಂಕರನಾಯಕ್ : ನಾವು ಅದನ್ನು ವೆರಿಫೈ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಬಿಜೆಪಿ ಸದಸ್ಯರುಗಳು ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಉಪಾಧ್ಯಕ್ಷರು : ಖರ್ಗೆಯವರು ಏನು ಹೇಳುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ಅವರು ಬಹಳ ಗಹನವಾಗಿ ಅಭ್ಯಾಸ ಮಾಡಿದ್ದಾರೆ ಹೇಳುತ್ತಿದ್ದಾರೆ, 1992ರಲ್ಲಿ ಆಕ್ಟ್ ಬಂದಿದೆ, ನನಗೆ ಏನೂ ಅಧಿಕಾರವಿಲ್ಲವೆಂದು ಹೇಳುತ್ತಿದ್ದಾರೆ. ತಾವು ಅದನ್ನು ನೋಡಿ ಹೇಳಿ. ಆದರೆ ನೀವು ಈಗ ಸಭೆಯನ್ನು ಮುಂದೂಡಿದರೂ ಕೂಡ ಮತ್ತೆ ರೀ ಅಸೆಂಬಲ್ ಆಗ ಬೇಕು. ಏಕೆಂದರೆ ರೈತರಿಗೆ ಕೊಡತಕ್ಕಂಥ ಪರಿಹಾರದ ಬಗ್ಗೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡುತ್ತೇವೆಂದು ಹೇಳಿದರು. ಮೊನ್ನೆ ಧರಣಿ ಮಾಡಿದಾಗ, ನಾನು ಅದರ ಬಗ್ಗೆ ಹೇಳಿಕೆ ಕೊಡುತ್ತೇನೆ, ರೈತರಿಗೆ ಪರ್ ಹೆಕ್ಟೇರ್‌ಗೆ ಎಷ್ಟು ಜಾಸ್ತಿ ಮಾಡುತ್ತೇವೆಂದು ಹೇಳುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ 2ನೇ ತಾರೀಖಿನ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಡಿಸಿಷನ್ ತೆಗೆದುಕೊಂಡು6ನೇ ತಾರೀಖು ನಿಮ್ಮ ಮುಂದೆ ಬರುತ್ತೇವೆಂದು ಹೇಳಿದರು. Before you adjourn the House. he should make a statement and we should know what quantum of compensation he has fixed per Acre/Hectare. ಮತ್ತು 23 ಜನ ರೈತರಿಗೂ ಕೂಡ ಒಂದೊಂದು ಲಕ್ಷ ರೂಪಾಯಿ ಕೊಡತಕ್ಕಂಥ ವ್ಯವಸ್ಥೆ ಬಗ್ಗೆ ಏನು ಮಾಡಿದ್ದೇವೆಂದು ಹೇಳುವಂತಹ ವ್ಯವಸ್ಥೆಯಾಗಬೇಕಾಗುತ್ತದೆ. ಅದಕ್ಕೋಸ್ಕರ ನೀವು ಅಡ್ಜರ್ನ್ ಮಾಡಿ ಆ ಕಡೆ ಹೋದರೆ, 6ನೇ ತಾರೀಖು ಅವರೇನು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ, ಆ ಉತ್ತರ ನಮಗೆ ಸಿಗಲಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ.

ಉಪಾಧ್ಯಕ್ಷರು : ಈಗ ತಾವು ಹೇಳುವಂತಹ ವಿಷಯ ಮಹತ್ವವಿದೆ. ಈಗ ಅವರ ಮನಸ್ಸಿಗೆ ಸಮಾಧಾನವಾಗಲಿಲ್ಲವೆಂದರೆ ಬೇರೆ ರೂಪದಿಂದ ನೋಟೀಸ್ ಕಳುಹಿಸಿ. ನಾವು ಮತ್ತೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದೇವೆ. ಆದುದರಿಂದ ತಾವು ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿಬಿಟ್ಟರೆ, ಮಾನ್ಯ ಖರ್ಗೆಯವರು ಏನು ಹೇಳಿದ್ದಾರೆ, ಅದಕ್ಕೆ ಸರ್ಕಾರದಿಂದ ಉತ್ತರವನ್ನು ಕೊಡಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 15 ನಿಮಿಷ ನೋಡಿ.

ಉಪಾಧ್ಯಕ್ಷರು : ಯಾವುದು ವಿಷಯ ಮಹತ್ವದ್ದು ಇದೆ ಎಂದು ನೀವೇ ನಿರ್ಧಾರ ಮಾಡಿ. ರೈತರ ವಿಷಯ ಮಹತ್ವದ್ದು ಇದೆಯೇ, ಮೆಡಿಕಲ್ ಕಾಲೇಜು ವಿಷಯ ಮಹತ್ವದ್ದು ಇದೆಯೇ ಯಾವುದು ಎಂದು ನಿರ್ಧಾರ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಇವತ್ತು ಉತ್ತರವನ್ನು ಕೊಡುತ್ತೇನೆ, ಕ್ಯಾಬಿನೆಟ್ ಮೀಟಿಂಗ್ ಮಾಡಿದ ಮೇಲೆ ಹೇಳುತ್ತೇನೆ ಎಂದು ಹೇಳಿದ್ದರು. ಮೇಲ್ಮನೆಯಲ್ಲಿ ಕೂಡ ಪರಿಹಾರದ ಬಗ್ಗೆ ಧರಣಿ ನಡೆದಿದೆ. ಅದಕ್ಕಾಗಿ ಉತ್ತರವನ್ನು ಹೇಳಿದರೆ ಅಲ್ಲೂ ಕೂಡ ಅದೇ ಹೇಳಿಕೆಯನ್ನು ಕೊಡುವುದಕ್ಕಾಗುತ್ತದೆ. ಅವರೂ ಕೂಡ ಅಲ್ಲಿ ಧರಣಿ ಅಂತ್ಯ ಮಾಡುತ್ತಾರೆ, ಮುಂದಿನ ವಿಚಾರ ನಡೆಸುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ದಯವಿಟ್ಟು ಇವರು ಧರಣಿ ಮುಗಿಸಿದರೆ ಮುಂದಿನ ಕಾರ್ಯಕಲಾಪ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಧರಣಿ ಮುಗಿಸಿ ಬನ್ನಿ, ನಂತರ ಅಧ್ಯಕ್ಷರು ಮತ್ತು ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ಅದನ್ನು ನಾವು ಮಾಡುವುದಕ್ಕಾಗುತ್ತದೆ. ಈಗ ಅಡ್ಜರ್ನ್ ಮಾಡಿದರೆ ಏನು ಉಪಯೋಗವಾಗುತ್ತದೆ.

(ಈ ಹಂತದಲ್ಲಿ ಮಾನ್ಯ ಕೆ.ಎಸ್. ಈಶ್ವರಪ್ಪನವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಎಸ್.ಎಸ್.ಪಾಟೀಲ್ : ಇವತ್ತು ಕಲಾಪ ನಡೆಸಿ, ನಾವು, ನೀವು ಇಲ್ಲೇ ಇದ್ದು ಸದನ ನಡೆಯಬೇಕು ಎಂದು ಹೇಳುವುದಿಲ್ಲ. ಆ ಮಾತು ನಾವು ಹೇಳುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಏನಾದರೂ ತಪ್ಪಿದ್ದರೆ ಕ್ರಮ ತೆಗೆದುಕೊಳ್ಳಿ. ಪ್ರಿವಿಲೇಜ್ ಮೂವ್ ಮಾಡಬಹುದು ಎಂದು ಹೇಳಿದ್ದಾರೆ. ಪ್ರಿವಿಲೇಜ್ ಮೂವ್ ಮಾಡಿ. ಅಧ್ಯಕ್ಷರ ನಿರ್ಣಯಕ್ಕೆ ಬಿಡುತ್ತೇವೆ. ಅದನ್ನು ನಾವು ಹೇಳುವುದಕ್ಕೆ ಆಗುವುದಿಲ್ಲ.

ಉಪಾಧ್ಯಕ್ಷರು : ಈಗ 15 ನಿಮಿಷ ಸದನವನ್ನು ಮುಂದೂಡಲಾಗಿದೆ. ತಾವೆಲ್ಲಾ ಕೊಠಡಿಗೆ ಬನ್ನಿ. ಅಲ್ಲಿ ಚರ್ಚೆ ಮಾಡೋಣ.

(ಸದನವು 5 ಗಂಟೆ 06 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 15 ನಿಮಿಷದ ನಂತರ ಸೇರಲು ನಿಶ್ಚಯಿಸಿತು)

(ಸದನವು 6-40 ಗಂಟೆಗೆ ಪುನಃ ಸಮಾವೇಶಗೊಂಡಿತು.)

(ಶ್ರೀ ಚಂದ್ರಶೇಖರ್ ಎಂ. ಮಾಮನಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ತಮ್ಮ ಎದುರುಗಡೆ, ಮಾನ್ಯ ಮುಖ್ಯಮಂತ್ರಿಯವರು, ಸಭಾನಾಯಕರು ಮತ್ತು ವಿವಿಧ ಮುಖಂಡರುಗಳನ್ನು ಕರೆಸಿ ಈ ವಿಚಾರದಲ್ಲಿ ಪ್ರಶ್ನೆ ಮಾಡಲಾಗಿದೆ. ಡಾ॥ ಕಾಂತಾರವರ ವಿಚಾರದಲ್ಲಿ ಏನು ಪ್ರಶ್ನೆಯನ್ನು ಎತ್ತಿದ್ದಾರೆ, ಅದರ ಕುರಿತಾಗಿ ಹೇಳುವುದಾದರೆ ಅವರು ಯಾವುದೇ ತರಹದ ತಪ್ಪನ್ನು ಮಾಡಿಲ್ಲ. ಇದರಲ್ಲಿ ಆಗಿರತಕ್ಕಂಥ ನ್ಯೂನತೆಗಳು ಮತ್ತು ಮೋಸ ಮೊದಲಾದಂಥ ವರ್ತನೆಗಳಿಂದ, ಮತ್ತು ವಂಚನೆ ಪ್ರಕರಣಗಳ ಕುರಿತು ಡಾ॥ ಕಾಂತಾರವರೇ ವಿಚಾರದ ಪ್ರಸ್ತಾವನೆ ಮಾಡಿರುವುದರಿಂದ ಅದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳತಕ್ಕಂಥಾದ್ದು ಅಲ್ಲ. ಬ್ಯೂರೋ ಆಫ್ ಇನವೆಸ್ಟಿಗೇಷನ್‌ರವರ ರಿಪೋರ್ಟ್‌ನಿಂದ ಸಂಪೂರ್ಣವಾಗಿರತಕ್ಕಂಥ ವಸ್ತುಸ್ಥಿತಿಯನ್ನು ಬಯಲಿಗೆ ತಂದಿದ್ದಾರೆ. ಆದ್ದರಿಂದ ಆ ವಿಚಾರದಲ್ಲಿ ಪ್ರಶ್ನೆ ಇಲ್ಲ. ಆದರೆ ಮಾನ್ಯ ರಾಮದಾಸ್ ಮತ್ತಿತರ ಹಿರಿಯರು ಇತ್ತೀಚೆಗೆ ಸೇರಿಸಿಕೊಂಡ 21 ಜನರ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಆ ಬಗ್ಗೆ ಹೇಳುವುದಾದರೆ, ಆ ಕುರಿತು ನಮ್ಮ ಅಪರ ಮುಖ್ಯ ಕಾರ್ಯದರ್ಶಿಯವರ ಮೂಲಕ ಎನ್‌ಕ್ವೈರಿ ಮಾಡಿಸಿ, ಒಂದು ತಿಂಗಳೊಳಗಾಗಿ ಅದರ ವರದಿಯನ್ನು ತರಿಸಿ ಕೊಳ್ಳುವ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದ್ದರಿಂದ ಸನ್ಮಾನ್ಯ ಶಾಸಕರುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ನಾನು ಸರಕಾರದ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ತಾವುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ದಯಮಾಡಿ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಅವರು ಹೇಳಿರತಕ್ಕಂಥಾದ್ದು ಕ್ಲಿಯರ್ ಅಲ್ಲ. ಯೂನಿವರ್ಸಿಟಿಯವರು ಎಕ್ಸಾಮಿನೇಷನ್ ಕಂಡಕ್ಟ್ ಮಾಡಿದ ಬಗ್ಗೆ ಎನ್‌ಕ್ವೈರಿ ಮಾಡಲು ನಾವು ಒಪ್ಪಿಕೊಂಡಿದ್ದೇವೆ. ಉಳಿದ ವಿಚಾರದ ಬಗ್ಗೆ ನಾನು ಏನು ಉತ್ತರದಲ್ಲಿ ಕೊಟ್ಟಿದ್ದೇನೆ, ಅದಕ್ಕೆ ನಾನು ಬದ್ಧನಾಗಿದ್ದೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಸಭಾನಾಯಕರು ಸ್ಟೇಟ್‌ಮೆಂಟನ್ನು ಕೊಡುತ್ತಾರೆ.

ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ತೊಗರಿ ಬೆಳೆ ಹಾನಿಯ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡವರಿಗೆ ಹೆಚ್ಚಿನ ಪರಿಹಾರ.

+ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ತೊಗರಿ ಬೆಳೆಯ ಹಾನಿಯ ಕಾರಣದಿಂದ ರೈತರು ನಾವನ್ನು ಅಪ್ಪುವವರೆಗೆ ದುಸ್ಥಿಗೆ ಹೋಗಿದ್ದಾರೆ. ಈ ಬಗ್ಗೆ ತತ್‌ಕ್ಷಣ ಏನಾದರೂ ಪರಿಹಾರವನ್ನು ಕೊಡಬೇಕೆಂದು ಮಾನ್ಯ ವಿರೋಧ ಪಕ್ಷದವರು ಮತ್ತು ನಮ್ಮ ಪಕ್ಷದವರು ಕೂಡ ಒತ್ತಾಯವನ್ನು ಮಾಡಿದ್ದರು. ಆಗ ಯಾವ ಒತ್ತಡವೂ ಇಲ್ಲದೇ ನಾವು ಒಪ್ಪಿಕೊಂಡಿದ್ದೆವು. ಅದಕ್ಕೆ ಸದನದ ಸಮಿತಿಯನ್ನು ಮಾಡಲು ಸೂಚಿಸಿದ್ದೆವು. ಏನಾದರೂ ಒಂದು ಆಧಾರವು ಬೇಕಾಗುತ್ತದೆ. ಆ ಆಧಾರದ ಮೇಲೆ ರೈತರುಗಳಿಗೆ ನಾವು ಎಷ್ಟರಮಟ್ಟಿಗೆ ಸಹಾಯ ಮಾಡಬಹುದು ಎಂಬುದನ್ನು ಸಮಿತಿಯು ಹೋಗಿ ನೋಡಿ ಬರಲಿ, ಎಂದು ಹೇಳಿದುದ್ದನ್ನು